# ಜನತಾ ವಾಣಿ

ಸಂಪಾದಕರು : ಎಂ.ಎಸ್. ವಿಕಾಸ್

ಮಧ್ಯ ಕರ್ನಾಟಕದ ಆಪ್ತ ಒಡನಾಡಿ

ದಾವಣಗೆರೆ
ಮಂಗಳವಾರ, ಫೆಬ್ರವರಿ 11, 2025

ಸಂಪುಟ : 51 ಸಂಚಿಕೆ : 270 ☎ 08192-254736 91642 99999 RNI No: 27369 ಪುಟ : 6 ರೂ : 5.00 www.janathavani.com janathavani@mac.com




## ‘ಸಾಮಾಜಿಕ ಮಾಧ್ಯಮ’ ಜನಹಿತಕ್ಕಾಗಿರಲಿ

### ತರಳಬಾಳು ಹುಣ್ಣಿಮೆ 7ನೇ ದಿನದದಲ್ಲಿ ತರಳಬಾಳು ಜಗದ್ಗುರುಗಳು

ದಾವಣಗೆರೆ, ಫೆ. 10-ವೈಜ್ಞಾನಿಕವಾಗಿ ಒಂದು ಯಂತ್ರವಾಗಿರುವ ಮೊಬೈಲ್ ಬಳಕೆ ಹಾಗೂ ಮಾಧ್ಯಮಗಳು ಜನಹಿತಕ್ಕಾಗಿ ಇರಲಿ. ಅದನ್ನು ದುರುಪಯೋಗ ಮಾಡಿಕೊಂಡು ಅಮೂಲ್ಯ ಜೀವನವನ್ನು ಹಾಳು ಮಾಡಿಕೊಳ್ಳದಿರಿ ಎಂದು ತರಳಬಾಳು ಜಗದ್ಗುರು ಡಾ. ಶಿವಮೂರ್ತಿ ಶಿವಾಚಾರ್ಯ ಸ್ವಾಮೀಜಿ ಕಿವಿಮಾತು ಹೇಳಿದರು.

ಭರಮಸಾಗರದಲ್ಲಿ ನಡೆಯುತ್ತಿರುವ ತರಳಬಾಳು ಹುಣ್ಣಿಮೆ ಮಹೋತ್ಸವದ ಏಳನೇ ದಿನದ ಕಾರ್ಯಕ್ರಮದ ಸಾನ್ನಿಧ್ಯ ವಹಿಸಿ ಶ್ರೀಗಳು ಮಾತನಾಡಿದರು.

ಮೊಬೈಲ್ ಬಳಕೆ ಕೆಟ್ಟದ್ದು ಎನ್ನುವುದಕ್ಕಿಂತ ಅದನ್ನು ಬಳಸುವವರು ಯಾವುದಕ್ಕೆ ಬಳಕೆ ಮಾಡಿಕೊಳ್ಳುತ್ತಿದ್ದಾರೆ ಎನ್ನುವುದು ಮುಖ್ಯವಾಗುತ್ತದೆ. ಮೊಬೈಲ್ ಸೇರಿದಂತೆ, ಸಾಮಾಜಿಕ ಮಾಧ್ಯಮದಿಂದ ಎಷ್ಟು ಸಂಸಾರಗಳು, ದಾಂಪತ್ಯಗಳು ಹಾಳಾಗಿರುವ ಉದಾಹರಣೆಗಳಿವೆ. ವೈಜ್ಞಾನಿಕ ಯಂತ್ರವಾಗಿರುವ ಮೊಬೈಲ್ ಬಳಕೆ ಮಾಡಿಕೊಳ್ಳುವುದರ ಮೇಲೆ ಒಳ್ಳೆಯದು, ಕೆಟ್ಟದ್ದು ನಿರ್ಧಾರವಾಗುತ್ತದೆ ಎಂದರು.

ಮಾಧ್ಯಮ ಎಷ್ಟೇ ಮುಂದುವರೆದರೂ, ಮನೆಯಲ್ಲಿಯೇ ಕುಳಿತು ಅಥವಾ ತಮ್ಮ ಅಂಗೈಯಲ್ಲಿಯೇ ತರಳಬಾಳು ಹುಣ್ಣಿಮೆ ವೀಕ್ಷಣೆ ಮಾಡಲು ಅವಕಾಶವಿದ್ದರೂ ಸಹ, ನೇರವಾಗಿ ಗುರುಗಳ ದರ್ಶನ ಮಾಡಬೇಕು. ಅನೇಕ ದಿಗ್ಗಜ್ಜರು, ಕಲಾವಿದರನ್ನು ಹತ್ತಿರದಿಂದ ನೋಡಿ ಕಣ್ತುಂಬಿಕೊಳ್ಳಬಹುದು ಮತ್ತು ಗುರುಗಳ ಮೇಲಿನ ಅಪಾರ ಭಕ್ತಿ ತಮ್ಮನ್ನು ಇಲ್ಲಿಗೆ ಬರಮಾಡಿಕೊಂಡಿದೆ ಎಂದು ಅಪಾರ ಸಂಖ್ಯೆಯ ಭಕ್ತರನ್ನು ನೋಡಿ ಸಂತಸ ವ್ಯಕ್ತಪಡಿಸಿದರು.

ಯಾರ ಮನಸ್ಸು ಒಳ್ಳೆಯದೋ ಅದು ಒಳ್ಳೆಯದರ ಬಗ್ಗೆ ಚಿಂತನೆ ಮಾಡುತ್ತದೆ. ಪರಸ್ಪರ ವಿಶ್ವಾಸವಿಲ್ಲದಂತಾಗಿದೆ. ಯಾರು ಎಲ್ಲಿದ್ದಾರೆ ಎಂದು ಜಿಪಿಎಸ್ ಮೂಲಕ ಕಂಡುಹಿಡಿಯುವ ಕಾಲ ಇದೆ. ಅನುಮಾನವೇ ಹೆಚ್ಚಾಗಿರುವ ಸಂದರ್ಭದಲ್ಲಿ ನಂಬಿಕೆ ಇದ್ದರೆ (4ನೇ ಪುಟಕ್ಕೆ)

### ಎಣ್ಣೆ ಕುಡಿದರೆ ಜೀವನದ ಮೈಲೇಜ್ ಸಿಗುವುದಿಲ್ಲ

ಹೊಸ ಬೈಕ್ ಖರೀದಿ ಮಾಡುವ ಸಂದರ್ಭದಲ್ಲಿ ಬಹಳ ಎಣ್ಣೆ ಕುಡಿಯುತ್ತೆ ಮೈಲೇಜ್ ಬರುತ್ತಿಲ್ಲ ಎಂದು ಹೇಳುವ ಯುವಕರು ತಾವು ಹೆಚ್ಚು ಎಣ್ಣೆ ಕುಡಿದು ವಾಹನ ಚಲಾಯಿಸಿದರೆ ಜೀವನದ ಮೈಲೇಜು ಸಿಗುತ್ತಾ ಎಂದ ಶ್ರೀಗಳು ವಾಹನ ಚಲಾಯಿಸುವಾಗ ಎಚ್ಚರವಹಿಸಿ, ಸುರಕ್ಷಿತವಾಗಿ ಮನೆಗಳಿಗೆ ತಲುಪುವಂತೆ ಕಿವಿಮಾತು ಹೇಳಿದರು. ನಿಮ್ಮ ಮೇಲೆ ಮಹತ್ತರ ಜವಾಬ್ದಾರಿ ಇದೆ. ತಂದೆ-ತಾಯಿ ಮತ್ತು ನಿಮ್ಮನ್ನು ಅವಲಂಬಿಸಿದ ಕುಟುಂಬದ ಸದಸ್ಯರಿದ್ದಾರೆ. ಯಾವುದೇ ಅಪಘಾತವಾಗದೇ ಸುರಕ್ಷಿತವಾಗಿ ತಲುಪಿದರೆ ಸಾಕು ಎಂದರು.

## ನಾಯಕತ್ವ ವಹಿಸಲು ರಾಜ್ಯಕ್ಕೆ ಬನ್ನಿ..!

### ಮಲ್ಲಿಕಾರ್ಜುನ ಖರ್ಗೆಗೆ ಪರಿಶಿಷ್ಟ ಸಚಿವರ ದುಂಬಾಲು



ಬೆಂಗಳೂರು,ಫೆ.-10- ರಾಷ್ಟ್ರ ರಾಜಕಾರಣ ಬಿಟ್ಟು, ರಾಜ್ಯ ರಾಜಕಾರಣಕ್ಕೆ ಬರುವಂತೆ ಪರಿಶಿಷ್ಟ ಸಮುದಾಯದ ಸಚಿವರುಗಳು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರಿಗೆ ಮನವಿ ಮಾಡಿದ್ದಾರೆ.

ಗೃಹ ಸಚಿವ ಡಾ.ಜಿ.ಪರಮೇಶ್ವರ್ ನಾಯಕತ್ವದಲ್ಲಿ ಸಮುದಾಯದ ಶಾಸಕರು ಹಾಗೂ ಸಚಿವರು, ನಾಳೆ ದೆಹಲಿಗೆ ತೆರಳಿ ಖರ್ಗೆ ಅವರನ್ನು ಭೇಟಿ ಮಾಡಿ ಈ ಆಹ್ವಾನ ನೀಡಲಿದ್ದಾರೆ.

ಲೋಕೋಪಯೋಗಿ ಸಚಿವ ಸತೀಶ್ ಜಾರಕಿಹೊಳಿ ಈಗಾಗಲೇ ದೆಹಲಿಯಲ್ಲೇ ಬಿಡಾರ ಹೂಡಿದ್ದಾರೆ, ಇವರ ಜೊತೆ ಉಳಿದವರು ಸೇರಿಕೊಂಡು ಖರ್ಗೆ ಅವರನ್ನು ಭೇಟಿ ಮಾಡುತ್ತಿದ್ದಾರೆ.

ಕರ್ನಾಟಕದಲ್ಲಿ ಸದ್ಯಕ್ಕೆ ಮುಖ್ಯಮಂತ್ರಿ ಹುದ್ದೆ ಖಾಲಿ ಇಲ್ಲ, ಆದರೂ, ಉಪಮುಖ್ಯಮಂತ್ರಿ ಡಿ.ಕೆ.ಶಿವಕುಮಾರ್ ಅವರಿಗೆ ದೊರೆಯಬಹುದಾದ ನಾಯಕತ್ವ ಸಾಧ್ಯತೆಗೆ ಸೆಡ್ಡು ಹೊಡೆದಿರುವ ಇವರುಗಳು, ಖರ್ಗೆ ಅವರನ್ನು ರಾಜ್ಯ ರಾಜಕಾರಣಕ್ಕೆ ತರಲು ವೇದಿಕೆ ಸಿದ್ಧಗೊಳಿಸುತ್ತಿದ್ದಾರೆ.

ದಲಿತ ಸಮುದಾಯಕ್ಕೆ ಕರ್ನಾಟಕದಲ್ಲಿ ಆಡಳಿತದ ನಾಯಕತ್ವ ದಕ್ಕಿಸಿಕೊಳ್ಳುವ ಅವಕಾಶ ಮುಂದೆ ದೊರೆಯದು, ಈಗ ಸಿಕ್ಕಿರುವ ಅವಕಾಶವನ್ನು ನಾವು ಸದ್ಬಳಕೆ ಮಾಡಿಕೊಂಡು ಮುಖ್ಯಮಂತ್ರಿ ಪಟ್ಟ ಪಡೆಯಲೇಬೇಕು.

ನೀವು ಈ ನಾಯಕತ್ವ ವಹಿಸಿಕೊಳ್ಳಲು ರಾಜ್ಯ ರಾಜಕಾರಣಕ್ಕೆ ಮತ್ತೆ ಬನ್ನಿ, ನಿಮಗೆ ಎಲ್ಲರ ಬೆಂಬಲ ದೊರೆಯಲಿದೆ, ಹಿಂದೆ ಮೂರು ಬಾರಿ ಮುಖ್ಯಮಂತ್ರಿ ಆಗುವ ಅವಕಾಶ ತಪ್ಪಿದೆ, ಈ ಬಾರಿ ಅದನ್ನು ಕಳೆದುಕೊಳ್ಳಬೇಡಿ ಎಂದು ಖರ್ಗೆ ಅವರಿಗೆ ದುಂಬಾಲು ಬೀಳಲಿದ್ದಾರಂತೆ.

ಪಕ್ಷ ಸಂಘಟನೆ ದೃಷ್ಟಿಯಿಂದ ನಾವು ಕರ್ನಾಟಕ ವಿಧಾನಸಭೆಯ ಬಜೆಟ್ ಅಧಿವೇಶನಕ್ಕೂ ಮುನ್ನ ನಾಲ್ಕು ವಿಭಾಗಗಳಲ್ಲಿ ದಲಿತ ಸಮುದಾಯದ ಬೃಹತ್ ಸಮಾವೇಶ ಹಮ್ಮಿಕೊಳ್ಳಲು ಅವಕಾಶ ನೀಡಿ ಎಂದು ಮನವಿ ಮಾಡಲಿದ್ದಾರೆ.

ಈ ಹಿಂದೆ, ಇಂತಹ ಸಮಾವೇಶ ನಡೆಸಲು ಪರಿಶಿಷ್ಟ ಜಾತಿ ಮತ್ತು ವರ್ಗದ ಶಾಸಕರು ಮತ್ತು ಮುಖಂಡರು ಸಭೆ ನಡೆಸಲು ಮುಂದಾದಾಗ ವರಿಷ್ಠರು ತಡೆ ನೀಡಿದ್ದರು. ಅಷ್ಟೇ ಅಲ್ಲ, ಕೊಟ್ಟಿರುವ ಕೆಲಸವನ್ನು ಬಾಯಿ ಮುಚ್ಚಿಕೊಂಡು ಮಾಡಿ ಎಂದು ಖರ್ಗೆ ಅವರೇ ಈ ಸಚಿವರುಗಳಿಗೆ (4ನೇ ಪುಟಕ್ಕೆ)

## ಮಠ, ಸ್ವಾಮಿಗಳು ಭಕ್ತ ಸಂಬಂಧಿಯಾಗಬೇಕು

### ಐರಣಿ ಮಠದ ನೂತನ ಪೀಠಾಧಿಪತಿಯ ಪಟ್ಟಾಭಿಷೇಕದಲ್ಲಿ ಸಾಣೇಹಳ್ಳಿ ಪಂಡಿತಾರಾಧ್ಯ ಶ್ರೀ



ರಾಣೇಬೆನ್ನೂರು, ಫೆ. 10- ಇವರು ಸ್ವಾಮೀಜಿ ಅಣ್ಣ, ತಮ್ಮ, ಅಳಿಯ, ಮಾವ ಎಂದು ಪರಿಚಯಿಸುವ ಮಠಗಳಾಗಬಾರದು. ಭಕ್ತರನ್ನು ಪರಿಚಯಿಸುವ ಮಠಗಳಾಗಬೇಕು. ಅಣ್ಣ-ತಮ್ಮಂದಿರ ಹೆಂಡಿರ ಜೊತೆ ಸರಸ - ಸಲ್ಲಾಪವಾಡುವ ಮಠಗಳಾಗಬಾರದು. ರಕ್ತ ಸಂಬಂಧಿಗಳ ಮಠವಾಗದೇ ಭಕ್ತ ಸಂಬಂಧಿಗಳ ಮಠವಾಗಬೇಕು ಎಂದು ಸಾಣೇಹಳ್ಳಿ ಮಠದ ಪೀಠಾಧ್ಯಕ್ಷರಾದ ಡಾ. ಪಂಡಿತಾರಾಧ್ಯ ಶಿವಾಚಾರ್ಯ ಮಹಾಸ್ವಾಮೀಜಿ ನುಡಿದರು.

ದಿನಾಂಕ 8ರಿಂದ ನಡೆದ ತಾಲ್ಲೂಕಿನ ಐರಣಿ ಹೊಳೆಮಠದ ನೂತನ ಪೀಠಾಧಿಪತಿಯ ಪಟ್ಟಾಭಿಷೇಕ ಹಾಗೂ ತುಲಾಭಾರ ಕಾರ್ಯಕ್ರಮ- ಧರ್ಮಸಭೆಯ ಸಾನ್ನಿಧ್ಯ ವಹಿಸಿ ಶ್ರೀಗಳು ಆಶೀರ್ವಚನ ನೀಡುತ್ತಿದ್ದರು.

ಇಂದಿನ ರಾಜಕೀಯ ಕ್ಷೇತ್ರ ಕುಲಗೆಟ್ಟಿದೆ, ಸಂಪೂರ್ಣ ಹಾಳಾಗಿದೆ. ಧರ್ಮ ಗುರುಗಳು ರಾಜಕಾರಣಿಗಳನ್ನು ಕರೆದು ಬುದ್ಧಿ ಹೇಳುವಂತಿರಬೇಕು. ಭಕ್ತರಲ್ಲಿ ಭೇದ-ಭಾವವೆಣಿಸದ, ನ್ಯಾಯ- ನಿಷ್ಠೂರತೆ ಹೊಂದಿರುವ ಗುರುಗಳು ಈ ಕಾರ್ಯ ಮಾಡಲು ಸಾಧ್ಯವಾಗಲಿದೆ. ಗುರು ದಾರಿ ತಪ್ಪಿದರೆ ಶಿಷ್ಯ, ಶಿಷ್ಯ ದಾರಿ ತಪ್ಪಿದರೆ ಗುರು ಕರೆದು ಬುದ್ಧಿ ಹೇಳುವಂತಿರಬೇಕು. ಒಬ್ಬರಿಗೆ ಇತರರು ಅಂಜಿ ಸರಿದಾರಿಯಲ್ಲಿ (4ನೇ ಪುಟಕ್ಕೆ)

## ಕೆನಡಾ 51ನೇ ರಾಜ್ಯ ಮಾಡುವ ಬಗ್ಗೆ ಅಧ್ಯಕ್ಷ ಟ್ರಂಪ್ ಗಂಭೀರ



ವಾಷಿಂಗ್ಟನ್, ಫೆ. 10 - ಕೆನಡಾ ದೇಶವನ್ನು ಅಮೆರಿಕದ 51ನೇ ರಾಜ್ಯ ಮಾಡಿಕೊಳ್ಳುವ ಬಗ್ಗೆ ತಾವು ಗಂಭೀರವಾಗಿರುವುದಾಗಿ ಅಮೆರಿಕದ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಸಂದರ್ಶನ ಒಂದರಲ್ಲಿ ತಿಳಿಸಿದ್ದಾರೆ.

ಕೆನಡಾವನ್ನು ಅಮೆರಿಕದ ವಶಕ್ಕೆ ತೆಗೆದುಕೊಳ್ಳಲು ಗಂಭೀರವಾಗಿರುವಿರಾ? ಎಂಬ ಪ್ರಶ್ನೆಗೆ ಅವರು ಹೌದು ಎಂದು ಉತ್ತರ ನೀಡಿದ್ದಾರೆ.

ಕೆನಡಾ ಅಮೆರಿಕದ 51ನೇ ರಾಜ್ಯ ಆಗುವುದು ಉತ್ತಮ. ಏಕೆಂದರೆ ನಾವು ಪ್ರತಿ ವರ್ಷ ಕೆನಡಾಗೆ 200 ಶತಕೋಟಿ ಡಾಲರ್ ಕಳೆದುಕೊಳ್ಳುತ್ತಿದ್ದೇವೆ. ಈ ರೀತಿ ಆಗುವುದನ್ನು ನಾನು ಬಯಸುವುದಿಲ್ಲ. ಪ್ರತಿ ವರ್ಷಕ್ಕೆ ನಾವು ಕೆನಡಾಗೆ ಏಕೆ 200 ಶತಕೋಟಿ ಡಾಲರ್ ನೀಡಬೇಕು? ಇದು ಕೆನಡಾಗೆ ಒಂದು ರೀತಿ ಸಬ್ಸಿಡಿ ನೀಡಿದಂತೆ ಎಂದು ಟ್ರಂಪ್ ಹೇಳಿದ್ದಾರೆ.

ಕೆನಡಾಗೆ ಅಮೆರಿಕ ನೆರವಾಗಿ ಸಬ್ಸಿಡಿ ನೀಡುತ್ತಿಲ್ಲ. ನೈಸರ್ಗಿಕ ಸಂಪನ್ಮೂಲದಿಂದ ಸಮೃದ್ಧವಾಗಿರುವ ಕೆನಡಾದಿಂದ ಅಮೆರಿಕವು ತೈಲ ಇತ್ಯಾದಿಗಳನ್ನು ಆಮದು ಮಾಡಿಕೊಳ್ಳುತ್ತಿದೆ. 2023ರಲ್ಲಿ ಉಭಯ ದೇಶಗಳ ನಡುವಿನ ವ್ಯಾಪಾರಿ ವಿನಿಮಯ ವ್ಯತ್ಯಾಸ 72 ಶತಕೋಟಿ ಡಾಲರ್‌ಗಳಿಗೆ ತಲುಪಿದೆ. ಕೆನಡಾದಿಂದ (2ನೇ ಪುಟಕ್ಕೆ)

## ತಿರುಪತಿ ಲಡ್ಡು ಕಲಬೆರಕೆ ಬಂಧಿತ ನಾಲ್ವರು ಕಸ್ಟಡಿಗೆ

ನವದೆಹಲಿ, ಫೆ. 10 - ತಿರುಪತಿ ತಿಮ್ಮಪ್ಪನ ದೇವಾಲಯದ ಪ್ರಸಾದದ ಕಲಬೆರಕೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತ ನಾಲ್ವರು ಆರೋಪಿಗಳನ್ನು ಫೆಬ್ರವರಿ 20ರವರೆಗೆ ಪೊಲೀಸ್ ಕಸ್ಟಡಿಗೆ ವಹಿಸಲಾಗಿದೆ.

ಸಿಬಿಐ ನೇತೃತ್ವದ ವಿಶೇಷ ತನಿಖಾ ತಂಡವು ಭೋಲೇ ಬಾಬಾ ಡೈರಿಯ ಮಾಜಿ ನಿರ್ದೇಶಕರಾದ ವಿಪಿನ್ ಜೈನ್ ಹಾಗೂ ಪೊಮಿಲ್ ಜೈನ್, ವೈಷ್ಣವಿ ಡೈರಿಯ ಅಪೂರ್ವ ಚಾವ್ಡಾ ಮತ್ತು ಎಆರ್ ಡೈರಿಯ ರಾಜು ರಾಜಶೇಖರನ್ ಅವರನ್ನು ಬಂಧಿಸಿದೆ. ತಿರುಪತಿ ತಿಮ್ಮಪ್ಪನ ಲಡ್ಡು ಪ್ರಸಾದಕ್ಕೆ ಕಲಬೆರಕೆ ಡೈರಿ ಉತ್ಪನ್ನಗಳನ್ನು ಪೂರೈಸಿದ ಆರೋಪ ಇವರ ಮೇಲಿದೆ.

ಬಂಧಿತರನ್ನು ಸೋಮವಾರ ತಿರುಪತಿ ನ್ಯಾಯಾಲಯದ ಎದುರು ಹಾಜರುಪಡಿಸಲಾಗಿದ್ದು, ಅವರನ್ನು ಫೆಬ್ರವರಿ 20ರವರೆಗೆ ನ್ಯಾಯಾಂಗ ಕಸ್ಟಡಿಗೆ ಒಪ್ಪಿಸಲಾಗಿದೆ. ತಿರುಪತಿ ತಿಮ್ಮಪ್ಪನ ಪ್ರಸಾದಕ್ಕಾಗಿ ಪೂರೈಸುವ ತುಪ್ಪಕ್ಕೆ ಸಂಬಂಧಿಸಿದಂತೆ (4ನೇ ಪುಟಕ್ಕೆ)

## ಮಲೇಬೆನ್ನೂರು : 14 ಅಕ್ರಮ ಪಂಪ್‌ಸೆಟ್ ತೆರವು : ನಿಷೇಧಾಜ್ಞೆ

ಮಲೇಬೆನ್ನೂರು, ಫೆ. 10 - ಭದ್ರಾ ನಾಲೆಯಲ್ಲಿ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳ ತೆರವು ಕಾರ್ಯಾಚರಣೆ ಶನಿವಾರದವರೆಗೂ ನಡೆದಿದ್ದು, 14 ಅಕ್ರಮ ಪಂಪ್ ಸೆಟ್ ಗಳನ್ನು ವಶಪಡಿಸಿಕೊಳ್ಳಲಾಗಿದೆ. ನೀರಾವರಿ ನಿಗಮದ 3 ಮತ್ತು 4ನೇ ಉಪವಿಭಾಗದಲ್ಲಿ ನಾಲೆಗೆ ರೈತರು ಅಕ್ರಮವಾಗಿ ಅಳವಡಿಸಿದ್ದ ಪಂಪ್‌ಸೆಟ್‌ಗಳ ಫುಟ್ವಾಲ್ ಎತ್ತಿ ಹಾಕಿಕೊಂಡು ಮತ್ತು ವಿದ್ಯುತ್ ಸಂಪರ್ಕಗಳನ್ನು ಅಧಿಕಾರಿಗಳ ತಂಡ ಕಡಿತಗೊಳಿಸಿದೆ.

ದಿಬ್ಬದಹಳ್ಳಿಯಿಂದ ಆರಂಭವಾದ ತೆರವು ಕಾರ್ಯಾಚರಣೆ ಕೊಮಾರನಹಳ್ಳಿ, ಮಲೇಬೆನ್ನೂರು, ಜಿ. ಬೇವಿನಹಳ್ಳಿ, ಯಲವಟ್ಟಿ ಕ್ಯಾಂಪ್‌ವರೆಗೆ ನಡೆದಿದೆ. ಅಕ್ರಮ ಪಂಪ್‌ಸೆಟ್‌ಗಳ ತೆರವು ಕಾರ್ಯದಲ್ಲಿ ಎಇಇ ಕೃಷ್ಣಮೂರ್ತಿ, ಉಪತಹಶೀಲ್ದಾರ್ ಆರ್ ರವಿ, (4ನೇ ಪುಟಕ್ಕೆ)

## 6.78 ಲಕ್ಷ ವಿದ್ಯಾರ್ಥಿಗಳಿಗೆ ಸಾಲ ಗ್ಯಾರಂಟಿ ನಿಧಿ ಯೋಜನೆ

ನವದೆಹಲಿ, ಫೆ. 10 - ಕೇಂದ್ರ ಸರ್ಕಾರದ ಸಾಲ ಗ್ಯಾರಂಟಿ ನಿಧಿ ಯೋಜನೆ ಅಡಿ 2024ರ ವರೆಗೆ 6.78 ಲಕ್ಷ ವಿದ್ಯಾರ್ಥಿಗಳಿಗೆ ನೆರವು ನೀಡಲಾಗಿದೆ ಎಂದು ಕೇಂದ್ರ ಶಿಕ್ಷಣ ಸಚಿವ ಧರ್ಮೇಂದ್ರ ಪ್ರಧಾನ್ ತಿಳಿಸಿದ್ದಾರೆ. ಈ ಯೋಜನೆ ಅಡಿ ವಿದ್ಯಾರ್ಥಿಗಳು ಅಡಮಾನರಹಿತವಾಗಿ ಶಿಕ್ಷಣ ಸಾಲ ಪಡೆಯಲು ಕೇಂದ್ರ ಸರ್ಕಾರ ನೆರವು ನೀಡುತ್ತಿದೆ. ಯೋಜನೆಯ ಅನ್ವಯ ಡಿಸೆಂಬರ್ 31, 2024ರ ವರೆಗೆ 3,019 ಕೋಟಿ ರೂ.ಗಳನ್ನು ನೀಡಲಾಗಿದೆ ಎಂದು ಪ್ರಧಾನ್ ಲೋಕಸಭೆಗೆ ತಿಳಿಸಿದ್ದಾರೆ.

## ಜನಗಣತಿಗೆ ಸೋನಿಯಾ ಒತ್ತಾಯ



ನವದೆಹಲಿ, ಫೆ. 10 - ಕೇಂದ್ರ ಸರ್ಕಾರ ಆದಷ್ಟು ಶೀಘ್ರ ಜನಗಣತಿ ಪೂರ್ಣಗೊಳಿಸಬೇಕು. ಜನಗಣತಿ ನಡೆಸದೇ ಇರುವ ಕಾರಣ ದೇಶದ 14 ಕೋಟಿ ಜನರು ಉಚಿತ ಆಹಾರ ಧಾನ್ಯದಿಂದ ವಂಚಿತರಾಗಿದ್ದಾರೆ ಎಂದು ಕಾಂಗ್ರೆಸ್ ನಾಯಕಿ ಸೋನಿಯಾ ಗಾಂಧಿ ಆರೋಪಿಸಿದ್ದಾರೆ.

ರಾಜ್ಯಸಭೆಯಲ್ಲಿ ಶೂನ್ಯ ವೇಳೆಯಲ್ಲಿ ಮಾತನಾಡಿದ ಅವರು 2011ರ ಜನಗಣತಿಯ ಅನ್ವಯ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆ ಯ ಫಲಾನುಭವಿಗಳನ್ನು ಗುರುತಿಸಲಾಗಿದೆ.ಜನಗಣತಿ ನಡೆಸದ ಕಾರಣ ಸುಮಾರು 14 ಕೋಟಿ ಜನರಿಗೆ ಆಹಾರ ಭದ್ರತಾ ಕಾಯ್ದೆಯ ಲಾಭ ದೊರೆತಿಲ್ಲ ಎಂದು ಹೇಳಿದರು. ಸ್ವತಂತ್ರ (4ನೇ ಪುಟಕ್ಕೆ)


## 2ನೇ ವರ್ಷದ ಪುಣ್ಯಸ್ಮರಣೆ



**ಶ್ರೀ ಗೋವಿಂದರಾಯ್ ಪಿ. ಕುರ್ಡೇಕರ್ (ಉತ್ತಂಗಿ)**

ನಿಧನ : 04.02.2023

ನೀವು ನಮ್ಮನ್ನಗಲಿ ಇಂದಿಗೆ ಎರಡು ವರ್ಷಗಳಾದವು.
ಸದಾ ನಿಮ್ಮ ಸ್ಮರಣೆಯಲ್ಲಿ...
ನೀವು ತೋರಿದ ಹಾದಿಯಲ್ಲಿ ಮುನ್ನಡೆಯುತ್ತಿರುವ...

ದುಃಖತಪ್ತರು : ಧರ್ಮಪತ್ನಿ, ಮಕ್ಕಳು, ಅಳಿಯಂದಿರು, ಮೊಮ್ಮಕ್ಕಳು, ಕುರ್ಡೇಕರ್ ಕುಟುಂಬದವರು ಹಾಗೂ ಬಂಧುಗಳು

ಶ್ರೀ ವೆಂಕಟೇಶ್ ಪಾಂಡುರಂಗ ಕುರ್ಡೇಕರ್ ಮತ್ತು ಸಹೋದರರು (ಉತ್ತಂಗಿ)

**ಉತ್ತಂಗಿ ಜ್ಯೂಯಲರ್ಸ್**

✦ ಚೌಕಿಪೇಟೆ, ✦ ಬೆಳ್ಳೂಡಿ ಗಲ್ಲಿ, ದಾವಣಗೆರೆ.
ಮೊ : 9242866452, 9916931295, 9591443343



## ಕೈಲಾಸ ಶಿವಗಣಾರಾಧನೆ



**ದಿ|| ಶ್ರೀಮತಿ ಗೌಡ್ರು ಎಸ್.ಜಿ. ಶಾಂತಮ್ಮ**

ದಾವಣಗೆರೆ ಸಿಟಿ ಶಾಮನೂರು ಗ್ರಾಮದ ವಾಸಿ ಶ್ರೀ ಎಸ್.ಜಿ.ಷಣ್ಮುಖಪ್ಪ ಮತ್ತು ಸಹೋದರರು ಇವರು ಮಾಡುವ ವಿಜ್ಞಾಪನೆಗಳು.
ದಿನಾಂಕ: 07–02–2025ರ ಶುಕ್ರವಾರ ಬೆಳಗ್ಗೆ 8.30 ಗಂಟೆಗೆ ನನ್ನ ಪೂಜ್ಯ ತಾಯಿಯವರಾದ
ದಿ|| ಗೌಡ್ರು ಎಸ್.ಜಿ.ಮೃತ್ಯುಂಜಯಪ್ಪ ಅವರ ಧರ್ಮಪತ್ನಿ
**ಶ್ರೀಮತಿ ಗೌಡ್ರು ಎಸ್.ಜಿ. ಶಾಂತಮ್ಮ**
ಶಿವಾಧೀನರಾದ ಪ್ರಯುಕ್ತ ಮೃತರ ಆತ್ಮಶಾಂತಿಗಾಗಿ
ಕೈಲಾಸ ಶಿವಗಣಾರಾಧನೆಯನ್ನು ಇಂದು ಮಂಗಳವಾರ ಬೆಳಗ್ಗೆ 10.30ಕ್ಕೆ
ಶಾಮನೂರಿನ ಶ್ರೀ ಆಂಜನೇಯ ಸ್ವಾಮಿ ಸಮುದಾಯ ಭವನ ಇಲ್ಲಿ ನೆರವೇರಿಸಲು ಗುರು-ಹಿರಿಯರು ನಿಶ್ಚಯಿಸಿರುವುದರಿಂದ ತಾವುಗಳು ಆಗಮಿಸಿ ಮೃತ ಆತ್ಮಕ್ಕೆ ಚಿರಶಾಂತಿಯನ್ನು ಕೋರಬೇಕಾಗಿ ವಿನಂತಿ.

**ದುಃಖತಪ್ತರು**

ಶ್ರೀ ಎಸ್.ಜಿ.ಷಣ್ಮುಖಪ್ಪ, ಎಸ್.ಜಿ. ಚನ್ನಪ್ಪ, ಎಸ್.ಜಿ. ಶಿವಾನಂದ, ಜಿ.ಈ. ಶಶಿಕಲಾ ಈಶ್ವರಪ್ಪ, ಎಸ್.ಜಿ. ಭಾರತಿ ಶರಣಪ್ಪ ಮತ್ತು ಅಳಿಯಂದಿರು, ಮೊಮ್ಮಕ್ಕಳು, ಮರಿಮೊಮ್ಮಕ್ಕಳು ಹಾಗೂ ಪಟೇಲ್ ವಂಶಸ್ಥರು, ಶಾಮನೂರು.

# ಕೆನಡಾ 51ನೇ ರಾಜ್ಯ ಮಾಡುವ ಬಗ್ಗೆ ಅಧ್ಯಕ್ಷ ಟ್ರಂಪ್ ಗಂಭೀರ

**(1ನೇ ಪುಟದಿಂದ)** ಅಮೆರಿಕ ಇಂಧನ ಆಮದು ಮಾಡಿಕೊಳ್ಳುತ್ತಿರುವ ಕಾರಣ ಈ ವ್ಯತ್ಯಾಸ ಹೆಚ್ಚಾಗುತ್ತಿದೆ.

ಕೆನಡಾ ಅಮೆರಿಕದ 51ನೇ ರಾಜ್ಯ ಆಗುವುದು ಉತ್ತಮ ಎಂದು ಟ್ರಂಪ್ ಪದೇ ಪದೇ ಸಲಹೆ ನೀಡಿದ್ದಾರೆ. ಆದರೆ, ಕೆನಡಿಯನ್ನರಲ್ಲಿ ಈ ಬಗ್ಗೆ ಒಲವಿಲ್ಲ.

ಕೆನಡಾದ ಪ್ರಧಾನ ಮಂತ್ರಿ ಜಸ್ಟಿನ್ ಟ್ರುಡ್ಯೂ ಅವರು ಕಳೆದ ಶುಕ್ರವಾರ ಉದ್ಯಮಿಗಳು ಹಾಗೂ ಕಾರ್ಮಿಕ ನಾಯಕರ ಜೊತೆ ಆಂತರಿಕ ಸಂವಾದ ನಡೆಸುವಾಗ, ಕೆನಡಾವನ್ನು ಅಮೆರಿಕ 51ನೇ ರಾಜ್ಯ ಮಾಡಿಕೊಳ್ಳಲು ಬಯಸುತ್ತಿರುವುದು ನೈಜ ಸಂಗತಿಯಾಗಿದೆ. ಕೆನಡಾದ ನೈಸರ್ಗಿಕ ಸಂಪನ್ಮೂಲ ಪಡೆಯಲು ಅಮೆರಿಕ ಒಲವು ಹೊಂದಿದೆ ಎಂದು ತಿಳಿಸಿದ್ದರು.

ಅಮೆರಿಕದ ಮಿತ್ರ ದೇಶವಾದ ಕೆನಡಾಗೆ ಎಚ್ಚರಿಕೆ ನೀಡುವುದನ್ನು ಟ್ರಂಪ್ ಮುಂದುವರೆಸಿದ್ದಾರೆ. ಕೆನಡಾ ಸ್ವತಂತ್ರ ದೇಶವಾಗಿ ಮುಂದುವರೆಯಲು ಸೂಕ್ತವಲ್ಲ. ಅದು ಸೈನಿಕ ರಕ್ಷಣೆಗಾಗಿ ಅಮೆರಿಕವನ್ನು ಹೆಚ್ಚು ಕಾಲ ಅವಲಂಭಿಸಲಾಗದು ಎಂದವರು ಹೇಳಿದ್ದರು. ಕೆನಡಾ ರಕ್ಷಣೆಗಾಗಿ ಹೆಚ್ಚು ವೆಚ್ಚ ಮಾಡುತ್ತಿಲ್ಲ. ನಾವು ಅವರನ್ನು ರಕ್ಷಿಸುತ್ತೇವೆ ಎಂದು ಕೆನಡಾ ಭಾವಿಸಿದೆ. ಆ ರೀತಿಯ ಕಲ್ಪನೆಗಳನ್ನು ಅವರು ಇಟ್ಟುಕೊಳ್ಳಬಾರದು. ಬೇರೊಂದು ದೇಶವನ್ನು ನಾವೇಕೆ ರಕ್ಷಿಸಬೇಕು? ಎಂದು ಟ್ರಂಪ್ ಕೇಳಿದ್ದಾರೆ.

ಅಕ್ರಮ ವಲಸಿಗರು ಹಾಗೂ ಮಾದಕ ಕಳ್ಳ ಸಾಗಣೆ ಹಿನ್ನೆಲೆಯಲ್ಲಿ ಕೆನಡಾ ಮತ್ತು ಮೆಕ್ಸಿಕೋ ದೇಶಗಳ ಮೇಲೆ ಶೇಕಡ 25 ರಷ್ಟು ಆಮದು ತೆರಿಗೆ ಹೇರುವುದಾಗಿ ಟ್ರಂಪ್ ಘೋಷಿಸಿದ್ದರು. ಆದರೆ 30 ದಿನಗಳ ಕಾಲ ಈ ಆದೇಶವನ್ನು ತಡೆದಿದ್ದಾರೆ. ಈ ನಡುವಿನ ಅವಧಿಯಲ್ಲಿ ಕೆನಡಾ ನಿರೀಕ್ಷಿತ ಕ್ರಮಗಳನ್ನು ತೆಗೆದುಕೊಂಡಿಲ್ಲ. ಈ ರೀತಿಯ ಪರಿಸ್ಥಿತಿ ಮುಂದುವರೆಸಲಾಗದು ಎಂದು ಟ್ರಂಪ್ ಎಚ್ಚರಿಕೆ ನೀಡಿದ್ದಾರೆ.

# ಮನಃ ಪರಿವರ್ತನೆಯಿಂದ ಸಮಾಜದಲ್ಲಿ ಸಾಮರಸ್ಯ, ಸುಭದ್ರತೆ ಸಾಧ್ಯ

## ಕೊಕ್ಕನೂರು : ಪಾನಮುಕ್ತ ಸದಸ್ಯರ ನವ ಜೀವನೋತ್ಸವ ಕಾರ್ಯಕ್ರಮದಲ್ಲಿ ಡಿವೈಎಸ್ಪಿ ಪ್ರಕಾಶ್ ಅಭಿಮತ



ಮಲೇಬೆನ್ನೂರು, ಫೆ.10- ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಜನಜಾಗೃತಿ ವೇದಿಕೆಯಿಂದ ರಾಜ್ಯದಲ್ಲಿ ನಡೆಸುತ್ತಿರುವ ಮದ್ಯವ್ಯಸನ ಮುಕ್ತ ಕಾರ್ಯಕ್ರಮ ತುಂಬಾ ಶ್ರೇಷ್ಠತೆಯಿಂದ ಕೂಡಿದ್ದು, ಸಮಾಜ ಪರಿವರ್ತನೆಯಿಂದ ಕುಟುಂಬ, ಸಮಾಜ, ದೇಶ ಸ್ವಾಸ್ಥ್ಯತೆ ಪಡೆಯುತ್ತವೆ ಎಂದು ಜಿಲ್ಲಾ ಮೀಸಲು ಪೊಲೀಸ್ ಪಡೆಯ ಡಿವೈಎಸ್ಪಿ ಪಿ.ಬಿ.ಪ್ರಕಾಶ್ ಅಭಿಪ್ರಾಯಪಟ್ಟರು.

ಕೊಕ್ಕನೂರು ಶ್ರೀ ಪವನದೇವ ಕಲ್ಯಾಣ ಮಂಟಪದಲ್ಲಿ ಶ್ರೀ ಕ್ಷೇತ್ರ ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆ ಮತ್ತು ಜಿಲ್ಲಾ ಜನಜಾಗೃತಿ ವೇದಿಕೆ, ಪ್ರಗತಿ ಬಂಧು ಸ್ವ-ಸಹಾಯ ಸಂಘಗಳ ಒಕ್ಕೂಟ ಇವರುಗಳ ಸಂಯುಕ್ತಾಶ್ರಯದಲ್ಲಿ ಹಮ್ಮಿಕೊಂಡಿದ್ದ ಪಾನಮುಕ್ತ ಸದಸ್ಯರ ನವ ಜೀವನೋತ್ಸವ ಕಾರ್ಯಕ್ರಮದಲ್ಲಿ ಪಾಲ್ಗೊಂಡು ಅವರು ಮಾತನಾಡಿದರು.

ಈ ಯೋಜನೆಯಡಿ ಹತ್ತು ಹಲವು ಜನಪರ ಕಾರ್ಯಕ್ರಮಗಳಿದ್ದು, ಅದರಲ್ಲಿ ಮದ್ಯವ್ಯಸನಿಗಳನ್ನು ಗುರುತಿಸಿ, ಅವರ ಮನಃಪರಿವರ್ತಿಸಿ, ಅವರ ಕುಟುಂಬಗಳಿಗೆ ಭದ್ರತೆ, ಭರವಸೆ ನೀಡುವ ಈ ಕಾರ್ಯಕ್ರಮ ತುಂಬಾ ಮಹತ್ವದ ಕಾರ್ಯವಾಗಿದೆ. ಜನ ಸಾಮಾನ್ಯರ ಮನ ಪರಿವರ್ತನೆಯಿಂದ ಸಮಾಜದಲ್ಲಿ ಸಾಮರಸ್ಯ ಮೂಡುತ್ತದೆ. ಇದು ಪೊಲೀಸ್ ಇಲಾಖೆಗೂ, ದೇಶದ ಸುಭದ್ರತೆಗೆ ಸಹಕಾರಿ ಎಂದು ಪ್ರಕಾಶ್ ಹೇಳಿದರು.

ಮದ್ಯವರ್ಜನೆ ಶಿಬಿರದಲ್ಲಾದ ಮನಃಪರಿವರ್ತನೆಯಿಂದ ಮದ್ಯಪಾನ ತ್ಯಜಿಸಿದ ಜಿಗಳಿಯ ಮಹೇಶ್ ಮಾತನಾಡಿ, ನಾವು ಮದ್ಯಸೇವನೆ ತ್ಯಜಿಸಿದ ಮೇಲೆ ಸಮಾಜದಲ್ಲಿ ಗೌರವ ಹೆಚ್ಚಾಗಿದೆ. ಕುಟುಂಬದಲ್ಲಿ ಎಲ್ಲರೂ ಸುಖವಾಗಿದ್ದೇವೆ.

ಕೈಯಲ್ಲಿ ಬ್ರಾಂಡಿ ಬಾಟಲಿ ಇತ್ತು, ಈಗ ಕೈಯಲ್ಲಿ ಮೈಕ್ ಇದೆ ಎಂದು ಸಂತಸ ವ್ಯಕ್ತಪಡಿಸಿದರು. ಎಂ.ಎನ್. ಹಳ್ಳಿ ಚಂದ್ರು ತಮ್ಮ ಅನಿಸಿಕೆ ವ್ಯಕ್ತಪಡಿಸಿದರು.

ಧರ್ಮಸ್ಥಳ ಗ್ರಾಮಾಭಿವೃದ್ಧಿ ಯೋಜನೆಯ ಜಿಲ್ಲಾ ನಿರ್ದೇಶಕ ಎಂ.ಲಕ್ಷ್ಮಣ್ ಮಾತನಾಡಿದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಯೋಜನಾಧಿಕಾರಿ ನಾಗರಾಜ್ ಕುಲಾಲ್ ಮಾತನಾಡಿ, ಯಾವುದೇ ಮದ್ದಿಲ್ಲದೆ, ಇಂಜೆಕ್ಷನ್ ಇಲ್ಲದೇ ಕೇವಲ ಪ್ರೀತಿ, ವಿಶ್ವಾಸ, ಆತ್ಮಬಲದಿಂದ ಮದ್ಯವನ್ನು ತ್ಯಜಿಸುವಂತೆ ಮಾಡಲಾಗುತ್ತದೆ. ರಾಜ್ಯದಲ್ಲಿ ಇದುವರೆಗೆ 1905 ಮದ್ಯವರ್ಜನ ಶಿಬಿರಗಳನ್ನು ನಡೆಸಿದ್ದು, 1.20 ಲಕ್ಷ ಜನ ಪಾನಮುಕ್ತರಾಗಿದ್ದಾರೆ ಎಂದು ತಿಳಿಸಲು ಹರ್ಷಿಸುತ್ತೇವೆ ಎಂದರು.

ಅಧ್ಯಾತ್ಮ ಚಿಂತಕ ಹೊಳೆಸಿರಿಗೆರೆಯ ಡಿ.ಸಿದ್ದೇಶ್ ಮಾತನಾಡಿ, ಧರ್ಮಸ್ಥಳ ಮಂಜುನಾಥ ಸ್ವಾಮಿಯ ಕೃಪೆಯಿಂದ ಮತ್ತು ಸ್ವಾಮಿಯ ಮೇಲಿನ ಭಕ್ತಿಯಿಂದ ಜನರು ಬದಲಾವಣೆಯತ್ತಾ ಹೆಜ್ಜೆ ಇಟ್ಟಿದ್ದಾರೆ. ಇದು ಮುಂದೆ ದೊಡ್ಡದಾಗಲಿದೆ ಎಂಬ ವಿಶ್ವಾಸ ಇದೆ ಎಂದರು.

ಜಿಲ್ಲಾ ಜನಜಾಗೃತಿ ವೇದಿಕೆ ಸದಸ್ಯರಾದ ಜಿ. ಮಂಜುನಾಥ್ ಪಟೇಲ್, ವೆಂಕಟರಾಮಾಂಜನೇಯ ಮಾತನಾಡಿದರು. ಶ್ರೀ ಆಂಜನೇಯ ಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷ ಅಭಿನಂದನ್ ಪಾಟೀಲ್ ಕಾರ್ಯಕ್ರಮ ಉದ್ಘಾಟಿಸಿದರು.

ಜಿಲ್ಲಾ ಜನಜಾಗೃತಿ ವೇದಿಕೆಯ ಸದಸ್ಯರಾದ ಜಿಗಳಿ ಪ್ರಕಾಶ್, ಹನುಮಂತರಾಯ, ಪ್ರಗತಿಪರ ಕೃಷಿಕ ನಿರಂಜನ ಪಾಟೀಲ್, ಜಿಗಳಿ ವಲಯ ಮೇಲ್ವಿಚಾರಕ ಹರೀಶ್ ಮತ್ತು ಪಾನಮುಕ್ತ ಸದಸ್ಯರು ಹಾಗೂ ಗ್ರಾಮಸ್ಥರು ಇದ್ದರು. ಎಂ.ಎನ್.ಹಳ್ಳಿ ವಲಯ ಮೇಲ್ವಿಚಾರಕಿ ರಕ್ಷಿತಾ ಸ್ವಾಗತಿಸಿದರು. ಮಲೇಬೆನ್ನೂರು ಯೋಜನಾಧಿಕಾರಿ ವಸಂತ್ ದೇವಾಡಿಗ ಕಾರ್ಯಕ್ರಮ ನಿರೂಪಿಸಿದರೆ, ಕೊಕ್ಕನೂರು ವಲಯ ಮೇಲ್ವಿಚಾರಕರಾದ ರಂಜಿತ ವಂದಿಸಿದರು.

# ಜನಸಂಖ್ಯೆಗೆ ಅನುಗುಣವಾಗಿ ಸರ್ಕಾರಿ ನೌಕರರು ಹೆಚ್ಚಾಗಬೇಕಿದೆ

## ಹರಿಹರ : ಪದಗ್ರಹಣ ಕಾರ್ಯಕ್ರಮದಲ್ಲಿ ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್ ಷಡಾಕ್ಷರಿ



ಹರಿಹರ, ಫೆ. 10 - ಸರ್ಕಾರ ಜಾರಿಗೊಳಿಸಿರುವ ಯೋಜನೆಗಳನ್ನು ಸರಿಯಾದ ರೀತಿಯಲ್ಲಿ ಅನುಷ್ಠಾನಕ್ಕೆ ತರುವಂತಹ ಶಕ್ತಿ, ಸಾಮರ್ಥ್ಯ, ಬದ್ಧತೆ, ಮತ್ತು ಹೊಣೆಗಾರಿಕೆ ಸರ್ಕಾರಿ ನೌಕರರಿಗೆ ಇರುವುದರಿಂದ, ಜನರು ನೆಮ್ಮದಿ ಬದುಕನ್ನು ಕಟ್ಟಿಕೊಳ್ಳಲು ಸಾಧ್ಯವಾಗಿದೆ ಎಂದು ಸರ್ಕಾರಿ ನೌಕರರ ಸಂಘದ ರಾಜ್ಯಾಧ್ಯಕ್ಷ ಸಿ.ಎಸ್. ಷಡಕ್ಷರಿ ಅಭಿಪ್ರಾಯಪಟ್ಟರು.

ನಗರದ ಗುರು ಭವನದಲ್ಲಿ ನಡೆದ ಸರ್ಕಾರಿ ನೌಕರರ 2024-29 ನೇ ಸಾಲಿನ ನೂತನ ಪದಾಧಿಕಾರಿಗಳ ಪದಗ್ರಹಣ ಸಮಾರಂಭ ಉದ್ಘಾಟಿಸಿ ಅವರು ಮಾತನಾಡಿದರು,

ರಾಜ್ಯದಲ್ಲಿ ಈ ಹಿಂದೆ 3.5 ಕೋಟಿ ಜನಸಂಖ್ಯೆ ಇದ್ದ ಸಮಯದಲ್ಲಿ ರಾಜ್ಯದಲ್ಲಿ 7.5 ಲಕ್ಷ ಸರ್ಕಾರಿ ನೌಕರರು ಕೆಲಸ ಮಾಡುತ್ತಿದ್ದರು, ಆದರೆ ಈಗ ರಾಜ್ಯದ ಜನ ಸಂಖ್ಯೆ 6.5 ಕೋಟಿಗೆ ಏರಿದ್ದರೂ 5 ಲಕ್ಷದ 12 ಸಾವಿರ ಸರ್ಕಾರಿ ನೌಕರರು ಇದ್ದಾರೆ.

ಕಳೆದ ಹಲವಾರು ವರ್ಷಗಳಿಂದ ಸಾಕಷ್ಟು ನೌಕರರು ನಿವೃತ್ತರಾಗಿದ್ದು, ರಾಜ್ಯ ಸರ್ಕಾರವು ಖಾಲಿ ಇರುವಂತಹ 2.5 ಲಕ್ಷ ನೌಕರರ ಹುದ್ದೆಯನ್ನು ಭರ್ತಿ ಮಾಡಿದರೆ ಸರ್ಕಾರದ ಯೋಜನೆಗಳನ್ನು ಅನುಷ್ಠಾನಕ್ಕೆ ತರುವುದಕ್ಕೆ ಸಹಕಾರಿಯಾಗುತ್ತದೆ ಎಂದರು.

ಸರ್ಕಾರ ಹೊಸ ಹೊಸ ಯೋಜನೆಗಳನ್ನು ರೂಪಿಸಿ, ಅವುಗಳನ್ನು ಅನುಷ್ಠಾನಕ್ಕೆ ತರುವ ಸಮಯದಲ್ಲಿ, ಕೆಲವು ಸರ್ಕಾರಿ ನೌಕರರ ಸಣ್ಣ ಪುಟ್ಟ ದೋಷಗಳನ್ನು ಹುಡುಕಿ, ಅವರಿಗೆ ಮಾನಸಿಕವಾಗಿ ಹಿಂಸೆ ನೀಡುತ್ತಾ, ಕೆಲಸದಿಂದ ವಜಾಗೊಳಿಸಬೇಕು ಎಂದು ಅರ್ಜಿಯನ್ನು ನೀಡುವಂತಹ ಪರಿಪಾಠ ದಿಂದಾಗಿ ನೌಕರರು ಸಾಕಷ್ಟು ತೊಂದರೆಗೆ ಸಿಲುಕಿದ್ದರು. ಆದರೆ ನಮ್ಮ ಸಂಘಟನೆಯು ಅಧಿಕಾರಕ್ಕೆ ಬಂದ ಮೇಲೆ ಮುಖ್ಯಮಂತ್ರಿಗಳ ಬಳಿ ಚರ್ಚಿಸಿ, ಅಂತಹ ಅರ್ಜಿಗಳನ್ನು ರದ್ದು ಮಾಡಿಸಿದೆ ಎಂದರು.

ಸಂಘದ ಜಿಲ್ಲಾ ಅಧ್ಯಕ್ಷ ಎನ್. ವೀರೇಶ್ ಒಡೇನಪುರ ಮಾತನಾಡಿ, ಎಲ್ಲಾ ಇಲಾಖೆಗಳಲ್ಲಿ ಬರುವಂತಹ ಸಮಸ್ಯೆಗಳಿಗೆ ಪರಿಹಾರಗಳನ್ನು ನೀಡಿದಾಗ ನಾವು ಪದಾಧಿಕಾರಿಗಳಾಗಿ ಆಯ್ಕೆ ಆಗಿದ್ದು ಸಾರ್ಥಕವಾಗುತ್ತದೆ ಎಂದು ಅಭಿಪ್ರಾಯಪಟ್ಟರು.

ತಹಶೀಲ್ದಾರ್ ಗುರುಬಸವರಾಜ್ ಮಾತನಾಡಿ, ನೌಕರರು ಸಾರ್ವಜನಿಕರ ಕೆಲಸವನ್ನು ಜವಾಬ್ದಾರಿಯಿಂದ ಮತ್ತು ಸಮರ್ಪಕವಾಗಿ ಅನುಷ್ಠಾನ ಗೊಳಿಸಿದರೆ ಮಾತ್ರ ಸರ್ಕಾರಿ ನೌಕರರಿಗೆ ಸಮಾಜದಲ್ಲಿ ಹೆಚ್ಚು ಗೌರವ ಸಿಗುತ್ತದೆ ಎಂದರು.

ಪ್ರಭಾರಿ ಬಿಇಓ ಹೆಚ್ ಕೃಷ್ಣಪ್ಪ , ತಾಪಂ ಇಓ ಸುಮಲತಾ ಮಾತನಾಡಿದರು. ಸರ್ಕಾರಿ ನೌಕರರ ಸಂಘದ ತಾಲ್ಲೂಕು ಅಧ್ಯಕ್ಷ ವಿಜಯ ಮಹಾಂತೇಶ್ ಅಧ್ಯಕ್ಷತೆ ವಹಿಸಿದ್ದರು. ರಾಜ್ಯ ಪರಿಷತ್ ಸದಸ್ಯ ಎಂ. ಉಮ್ಮಣ್ಣ ಪ್ರಾಸ್ತಾವಿಕ ಮಾತನಾಡಿದರು.

ಈ ಸಂದರ್ಭದಲ್ಲಿ ಶಾಸಕ ಬಿ.ಪಿ. ಹರೀಶ್, ಪ್ರಭಾರಿ ಬಿಇಓ ಹೆಚ್. ಕೃಷ್ಣಪ್ಪ, ಅಬಕಾರಿ ಇಲಾಖೆಯ ಎಇಇ ಕೆ.ಶಿವರಾಜ್, ಆರೋಗ್ಯ ಇಲಾಖೆ ಡಾ.ಅಬ್ದುಲ್ ಖಾದರ್, ಅರಣ್ಯಾಧಿಕಾರಿ ಟಿ.ಆರ್. ಅಮೃತ, ಎಪಿಎಂಸಿ ಮರುಳಸಿದ್ದಯ್ಯ, ಜಿಲ್ಲಾ ನೌಕರರ ಸಂಘದ ಖಜಾಂಚಿ ಬಿ. ಆರ್. ತಿಪ್ಪೇಸ್ವಾಮಿ, ಟಿ. ಓಬಳಪ್ಪ ದಾವಣಗೆರೆ, ಮಾಜಿ ನೌಕರರ ಸಂಘದ ಅಧ್ಯಕ್ಷ ರೇವಣಸಿದ್ದಪ್ಪ ಅಂಗಡಿ, ಎಂ. ವಿ. ಹೊರಿಕೇರಿ, ಶರಣ್ ಕುಮಾರ್ ಹೆಗಡೆ, ಎಂ. ಎಂ. ರಾಜಮ್ಮ, ಡಿ.ಎಂ. ಮಂಜುನಾಥಯ್ಯ, ಕುಬೇಂದ್ರ ಮೆಕ್ಕಪ್ಪನವರ್, ಈಶಪ್ಪ ಬೂದಿಹಾಳ, ಹೆಚ್. ಚಂದ್ರಪ್ಪ, ಪಿ. ಪ್ರಕಾಶ್, ಚಂದ್ರಪ್ಪ ದೊಗ್ಗಳ್ಳಿ, ಮುಸ್ತಾಕ್ ಆಹ್ಮದ್ ಇತರರು ಹಾಜರಿದ್ದರು.

ಪ್ರಾರ್ಥನೆ ಶಿವಮೂರ್ತಿ, ನಾಡಗೀತೆ ತಿಪ್ಪೇರುದ್ರಸ್ವಾಮಿ ಪ್ರೌಢ ಶಾಲಾ ಮಕ್ಕಳಿಂದ, ಸ್ವಾಗತ ವೀರಪ್ಪ, ನಿರೂಪಣೆ ಗದಿಗೆಪ್ಪ ಹಳೆಮನೆ, ವಂದನಾರ್ಪಣೆಯನ್ನು ಶೈಲಾ ಮೈದೂರು ಮಾಡಿದರು.

# ಗಣಿತದ ಕಲಿಕೆ ಕಷ್ಟಕರ ವಿದ್ಯೆ ಅಲ್ಲ




ದಾವಣಗೆರೆ, ಫೆ.10 - ದೇಹದ ಆಂತರಿಕ ಕ್ರಿಯೆಗಳಿಂದ ಮೊದಲ್ಗೊಂಡು ಹೊರಜಗತ್ತಿನ ಎಲ್ಲ ವ್ಯವಹಾರಗಳಲ್ಲೂ ಗಣಿತವು ಹಾಸು ಹೊಕ್ಕಾಗಿದ್ದು, ಗಣಿತದ ಕಲಿಕೆ ಕಷ್ಟಕರ ವಿದ್ಯೆ ಅಲ್ಲ ಎಂದು ಹಿರಿಯ ಪತ್ರಕರ್ತ ಹೆಚ್.ಬಿ. ಮಂಜುನಾಥ ಅಭಿಪ್ರಾಯ ಪಟ್ಟರು.

ನಿನ್ನೆ ಸಂಜೆ ನಗರದ ಆರ್ಯಭಟ ಅಬ್ಯಾಕಸ್ ಮತ್ತು ವೇದಿಕ್ ಮ್ಯಾಥ್ಸ್ ನ ನಾಲ್ಕನೇ ಅಂತರ ಕೇಂದ್ರ ಸ್ಪರ್ಧಾ ಉದ್ಘಾಟನಾ ಕಾರ್ಯಕ್ರಮದ ಮುಖ್ಯ ಅತಿಥಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಸಣ್ಣ ಸಣ್ಣ ಲೆಕ್ಕಗಳಿಗೂ ಕ್ಯಾಲ್ಕುಲೇಟರ್ ಹಾಗೂ ಮೊಬೈಲ್ ಗಳನ್ನು ಬಳಸುತ್ತಾ ಇಂದಿನ ಪೀಳಿಗೆ ಸ್ವಸಾಮರ್ಥ್ಯದ ಗಣಿತವನ್ನು ಮರೆಯುತ್ತಿದ್ದಾರೆ, ಉಪಕರಣಗಳಿಗಿಂತಲೂ ವೇಗವಾಗಿ ಸ್ವತಃ ಗಣಿತ ಮಾಡಬಹುದಾದ ಅಬ್ಯಾಕಸ್ ಹಾಗೂ ವೇದಿಕ್ ಗಣಿತಗಳ ಕಲಿಕೆ ಒಳ್ಳೆಯದು ಎಂದರು.

ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಮಾಗನೂರು ಬಸಪ್ಪ ಪಬ್ಲಿಕ್ ಟ್ರಸ್ಟ್‌ನ ಗೌರವ ಕಾರ್ಯದರ್ಶಿ ಸಂಗಮೇಶ್ವರ ಗೌಡ್ರು, ಅಬಾಕಸ್ ಕಲಿಯುವುದರಿಂದ ಮಕ್ಕಳಲ್ಲಿ ಗಣಿತದ ಬುದ್ಧಿ ಚುರುಕಾಗುತ್ತದೆ, ಸಾಧನೆಗೆ ಇದು ಅನುಕೂಲ ಎಂದರು. ಮತ್ತೋರ್ವ ಮುಖ್ಯ ಅತಿಥಿ ಡಾ. ಹರ್ಷ ಬಾಬಾಜಿ ಮಾತನಾಡಿ, ಮಕ್ಕಳ ಶಿಕ್ಷಣದಲ್ಲಿ ಶಿಕ್ಷಕರೊಂದಿಗೆ ಪೋಷಕರ ಪಾತ್ರವೂ ಮಹತ್ತರವಾಗಿದೆ ಎಂದರು.

ಆರ್ಯಭಟ ಅಬ್ಯಾಕಸ್‌ನ ರಾಜೇಶ್ವರಿ ಚಿದಾನಂದರವರ ಅಧ್ಯಕ್ಷತೆಯಲ್ಲಿ ಕಾರ್ಯದರ್ಶಿ ನಾಗರತ್ನ ಚಂದ್ರಮೌಳಿಯವರ ಉಪಸ್ಥಿತಿಯಲ್ಲಿ ನಡೆದ ಕಾರ್ಯಕ್ರಮದಲ್ಲಿ ಕು.ಸ್ತುತಿ ಪ್ರಾರ್ಥಿಸಿದರು.

ಮಕ್ಕಳ ಅಬ್ಯಾಕಸ್ ಪ್ರತಿಭಾ ಪ್ರಾತ್ಯಕ್ಷಿಕೆಯನ್ನು ಜಯ ಶ್ರಾವಣಿ ನಿರ್ವಹಿಸಿದರು. ನವ್ಯಾ ನಿರೂಪಿಸಿದರು. ಕು. ಶುದ್ಧಿ ವಂದಿಸಿದರು. ಮಾಗನೂರು ಬಸಪ್ಪ ಪಬ್ಲಿಕ್ ಶಾಲೆಯ ಪ್ರಾಂಗಣದಲ್ಲಿ ಕಾರ್ಯಕ್ರಮ ನೆರವೇರಿತು.

# ಸರ್ವತೋಮುಖ ಬೆಳವಣಿಗೆಗೆ ಆಸಕ್ತಿ, ಏಕಾಗ್ರತೆ ಮುಖ್ಯ

## ಪೂರ್ವರಂಗ ನಮನ : ಭರತ ನಾಟ್ಯದ ನೃತ್ಯ ವೈಭವ



ದಾವಣಗೆರೆ, ಫೆ.10- ಮಕ್ಕಳು ಕಲೆ, ಸಾಹಿತ್ಯ ಸೇರಿದಂತೆ ವಿವಿಧ ಕ್ಷೇತ್ರಗಳಲ್ಲಿ ಆಸಕ್ತಿ ಮತ್ತು ಏಕಾಗ್ರತೆಯಿಂದ ತೊಡಗಿಸಿಕೊಂಡರೆ, ಅವರು ಸರ್ವತೋಮುಖವಾಗಿ ಅಭಿವೃದ್ಧಿ ಹೊಂದುತ್ತಾರೆ ಎಂದು ನಮನ ಅಕಾಡೆಮಿಯ ಉಪಾಧ್ಯಕ್ಷರೂ ಆದ ದೂಡಾ ಅಧ್ಯಕ್ಷ ದಿನೇಶ್ ಕೆ. ಶೆಟ್ಟಿ ತಿಳಿಸಿದರು.

ನಮನ ಅಕಾಡೆಮಿ ವತಿಯಿಂದ ನಗರದ ಬಾಪೂಜಿ ಸಭಾಂಗಣದಲ್ಲಿ ನಡೆದ 'ಪೂರ್ವ ರಂಗ ನಮನ' ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಭರತನಾಟ್ಯ ಪ್ರದರ್ಶನ ನೀಡಲು ಸಜ್ಜುಗೊಂಡ ಈ ಮಕ್ಕಳಲ್ಲಿ ಶ್ರದ್ಧೆ, ಪರಿಶ್ರಮ ಹಾಗೂ ಆಸಕ್ತಿ ಎದ್ದು ಕಾಣುತ್ತಿದೆ. ಇಂತಹ ಮಕ್ಕಳು ಓದಿನಲ್ಲೂ ಮುಂದೆ ಬರುತ್ತಾರೆ. ಈ ಮಕ್ಕಳಿಗೆ ಅಂತರ್ ರಾಷ್ಟ್ರೀಯ ಮಟ್ಟದ ಕಲಿಕೆ ನೀಡುತ್ತಿರುವ ಡಿ.ಕೆ ಮಾಧವಿ ಅವರ ಕಾರ್ಯ ಶ್ಲಾಘನೀಯ ಎಂದರು.

ನಮಶ್ರೀ ಧರಣಿ ಟಿ. ಕಶ್ಯಪ್ ಮಾತನಾಡಿ, ಮಕ್ಕಳು ಪ್ರಸ್ತುತ ಪಡಿಸಿದ ನೃತ್ಯಗಳಲ್ಲಿ ಅವರ ಗುರುಗಳಾದ ಡಿ.ಕೆ ಮಾಧವಿ ಅವರ ಬದ್ಧತೆ, ಶ್ರಮ ಎಲ್ಲವೂ ಕಾಣುತ್ತಿದೆ. ಅವರ ನೃತ್ಯದ ನಿತ್ಯ ಸೇವೆ ಹೀಗೆ ಮುಂದುವರೆಯಲಿ ಎಂದು ಆಶಿಸಿದರು.

ನೃತ್ಯ ನಾಟಕದ ದೃಶ್ಯ ವರ್ಧಕ ಅಂಶಗಳು, ಗಾಯನ-ಸಂಗೀತ ಸಂಯೋಜನೆ ಹಾಗೂ ನೃತ್ಯದ ಅಚಲ ಶೈಲಿಯು ಪ್ರೇಕ್ಷಕರನ್ನು ಮಂತ್ರ ಮುಗ್ಧಗೊಳಿಸಿತು.

ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ, ನಗರಸಭಾ ಮಾಜಿ ಅಧ್ಯಕ್ಷ ಆರ್.ಹೆಚ್ ನಾಗಭೂಷಣ್, ನಮನ ಅಕಾಡೆಮಿ ಅಧ್ಯಕ್ಷ ಗೋಪಾಲಕೃಷ್ಣ, ನಿರ್ದೇಶಕ ಪಿ.ಸಿ. ರಾಮನಾಥ್, ಅನಿಲ್ ಬಾರಂಗಳ್, ಕಿರಣ್ ರವಿ ನಾರಾಯಣ್, ಸಿ.ಆರ್. ರಜತ್, ಗಾಯತ್ರಿ, ಮಾನಸ, ರಾಮನಾಥ್ ಮತ್ತಿತರರಿದ್ದರು.

# 17ಕ್ಕೆ ಆವರಗೊಳ್ಳ ವೀರಭದ್ರ ಸ್ವಾಮಿ ರಥೋತ್ಸವ



ದಾವಣಗೆರೆ, ಫೆ.10- ಇಲ್ಲಿಗೆ ಸಮೀಪದ ಆವರಗೊಳ್ಳ ಗ್ರಾಮದ ಶ್ರೀ ವೀರಭದ್ರೇಶ್ವರ ಸ್ವಾಮಿಯ ರಥೋತ್ಸವವು ಇದೇ ದಿನಾಂಕ 17ರಂದು ಜರುಗಲಿದೆ ಎಂದು ವೀರಭದ್ರೇಶ್ವರ ಸ್ವಾಮಿ ಸೇವಾ ಸಮಿತಿಯ ಅಧ್ಯಕ್ಷ ಬಿ.ಎಂ. ಷಣ್ಮುಖಯ್ಯ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಆವರಗೊಳ್ಳದ ಶ್ರೀ ಓಂಕಾರ ಶಿವಾಚಾರ್ಯ ಸ್ವಾಮೀಜಿ ಸಾನ್ನಿಧ್ಯದಲ್ಲಿ ನಾಡಿದ್ದು ದಿನಾಂಕ 12ರಿಂದ ಇದೇ ದಿನಾಂಕ 20ರ ವರೆಗೆ ವಿವಿಧ ವಾಹನಗಳ ಉತ್ಸವಾದಿಗಳು 9 ದಿನಗಳ ಕಾಲ ನಡೆಯಲಿದೆ ಎಂದು ಹೇಳಿದರು.

ಫೆ.12ರ ಬುಧವಾರದಂದು ನಂದಿ 'ಧ್ವಜಾರೋಹಣ' ಹಾಗೂ ಕಳಸ ಕನ್ನಡಿ ಮತ್ತು ಸಕಲ ಬಿರುದಾವಳಿಗಳೊಂದಿಗೆ ಸ್ವಾಮಿಯನ್ನು ಮೆರವಣಿಗೆಯೊಂದಿಗೆ ಕರೆತರಲಾಗುವುದು.

13ರ ಗುರುವಾರ ರಾತ್ರಿ 9ಕ್ಕೆ 'ಬಸವೇಶ್ವರ ಆರೋಹಣ ಉತ್ಸವ', 14ರ ಶುಕ್ರವಾರ ರಾತ್ರಿ 9 ಗಂಟೆಗೆ ಸರ್ಪಾರೋಹಣ ಉತ್ಸವ, 15ರ ಶನಿವಾರ ರಾತ್ರಿ 8 ಗಂಟೆಗೆ ರಥಕ್ಕೆ ಕಳಸಾರೋಹಣ ಹಾಗೂ 9 ಗಂಟೆಗೆ ಅಶ್ವಾರೋಹಣ ಉತ್ಸವ ನಡೆಯಲಿವೆ.

16ರ ಭಾನುವಾರ ರಾತ್ರಿ ದೊಡ್ಡಬಾತಿ ರೇವಣಸಿದ್ದೇಶ್ವರ ಸ್ವಾಮಿ ಮತ್ತು ಬೀರಲಿಂಗೇಶ್ವರ ಸ್ವಾಮಿಯ ಆಗಮನ, ವೀರಭದ್ರ ಸ್ವಾಮಿಗೆ ಆವರಗೊಳ್ಳ ಪುರವರ್ಗ ಹಿರೇಮಠಸ್ಥರಿಂದ ಹರಿದ್ರಾಲೇಪನ ಹಾಗೂ ತೇರುಮನೆ ಚೌಡೇಶ್ವರಿಗೆ ದೇವಸ್ಥಾನ ವತಿಯಿಂದ ಉಡಿ ತುಂಬಲಾಗುವುದು.

17ರ ಸೋಮವಾರ ಸಂಜೆ 6 ಗಂಟೆಗೆ ಸ್ವಾಮಿಯ ಮಹಾ ರಥೋತ್ಸವ ನಡೆದ ಬಳಿಕ ರಾತ್ರಿ ಉಯ್ಯಾಲೆ ಮಂಟಪದಲ್ಲಿ ಸ್ವಾಮಿ ಆಸೀನರಾಗಲಿದ್ದು ನಂತರ ವೀರಗಾಸೆ ಸೇವೆ ನಡೆಯಲಿದೆ. 18ರಂದು ಮಂಗಳವಾರ ಬೆಳಗ್ಗೆ 8ಕ್ಕೆ ಸ್ವಾಮಿಯ ಗುಗ್ಗಳ ಸೇವೆ, ರಾತ್ರಿ 10 ಗಂಟೆಗೆ ಭಕ್ತರಿಂದ ಓಕಳಿ ಸೇವೆ ಮತ್ತು ಗಂಗಾ ಪೂಜೆ ನಡೆಯಲಿದೆ.

19ರಂದು ಬೆಳಗ್ಗೆ 8 ಗಂಟೆಗೆ ಸಕಲ ಬಿರುದಾವಳಿಗಳೊಂದಿಗೆ ಉಯ್ಯಾಲೆ ಮಂಟಪದಿಂದ ಸ್ವಾಮಿಯ ಗುಗ್ಗಳದೊಂದಿಗೆ ರೇವಣಸಿದ್ದೇಶ್ವರ ಹಾಗೂ ಬೀರಲಿಂಗೇಶ್ವರ ಸ್ವಾಮಿಗಳೊಂದಿಗೆ ದೇವಸ್ಥಾನಕ್ಕೆ ಬಂದು ಸೇರುವುದು. ಕೊನೆಯ ದಿನವಾದ 20ನೇ ತಾರೀಖಿನಂದು ಗುರುವಾರ ಕಂಕಣ ವಿಸರ್ಜನೆ ನಡೆಯಲಿದೆ. ಈ ವೇಳೆ ದೇವಸ್ಥಾನ ಸಮಿತಿಯ ವಿ. ವೀರಯ್ಯ, ಖಜಾಂಚಿ ಡಿ. ವೀರಯ್ಯ, ನಿರ್ದೇಶಕ ಹೆಚ್. ರಾಜಶೇಖರ್, ವೀರಭದ್ರಸ್ವಾಮಿ ಸುದ್ದಿಗೋಷ್ಠಿಯಲ್ಲಿ ಇದ್ದರು.

## ರಾಣೇಬೆನ್ನೂರಿನಲ್ಲಿ ಇಂದು ಭಜನೆ

ದಿ. ದೊಡ್ಡನಾಗಪ್ಪ ಹಾಗೂ ಸಣ್ಣನಾಗಪ್ಪ ಕಾಕಿ ಅವರ ಸ್ಮರಣಾರ್ಥ ಕಾಕಿ ಜನಸೇವಾ ಸಂಸ್ಥೆ ವತಿಯಿಂದ ಇಂದು ಸಂಜೆ ಸುರೇಶೆಟ್ಟಿಕೊಪ್ಪದ ಬ್ರಹ್ಮಲಿಂಗೇಶ್ವರ ಭಜನಾ ಸಂಘ, ಅಡವಿ ಸೋಮಾಪುರದ ಮರಿಯಮ್ಮದೇವಿ ಭಜನಾ ಸಂಘದವರಿಂದ ಸವಾಲ್, ಜವಾಬ್ ಭಜನೆ ನಡೆಯಲಿವೆ. ಗೌರಿಶಂಕರ ನಗರದ ಬಿಇಓ ಕಛೇರಿ ಬಳಿಯ ದಿವಂಗತರ ಮಂದಿರದಲ್ಲಿ ಅಂದು ಬೆಳಿಗ್ಗೆ ಬೃಹತ್ ರಕ್ತದಾನ ಶಿಬಿರ, ದೇಹ ದಾನ ಕುರಿತು ಅರಿವು ಮೂಡಿಸುವ ಕಾರ್ಯಕ್ರಮ, ಜೊತೆಗೆ ಕಸಾಪ ದತ್ತಿ ಕಾರ್ಯಕ್ರಮ ಸಹ ನಡೆಯಲಿದೆ ಎಂದು ಶ್ರೀನಿವಾಸ ಕಾಕಿ ಹಾಗೂ ರೂಪಾ ಕಾಕಿ ತಿಳಿಸಿದ್ದಾರೆ.

# ಜೀತ ಪದ್ಧತಿ ವಿರುದ್ಧ ಕಾನೂನು ಕ್ರಮ

## ಬಾಲ್ಯವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿ ನಿರ್ಮೂಲನೆ ಜಾಗೃತಿ ರಥಕ್ಕೆ ಹಸಿರು ನಿಶಾನೆ ತೋರಿದ ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್



ದಾವಣಗೆರೆ, ಫೆ. 10- ಬಾಲ್ಯಾವಸ್ಥೆ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ದತಿ ನಿರ್ಮೂಲನೆಗೆ ಜನ ಸಾಮಾನ್ಯರಿಗೆ ಜಾಗೃತಿ ಮೂಡಿಸಲಾಗುತ್ತಿದ್ದು, ಜೀತ ಪದ್ಧತಿ ಕಂಡುಬಂದಲ್ಲಿ ಕಾನೂನು ಕ್ರಮ ಅನಿವಾರ್ಯ ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ತಿಳಿಸಿದರು.

ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರ, ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್ ವತಿಯಿಂದ ಜಿಲ್ಲಾಡಳಿತ ಭವನದಲ್ಲಿ ಇಂದು ಆಯೋಜಿಸಲಾಗಿದ್ದ ಬಾಲ್ಯವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿ ನಿರ್ಮೂಲನೆ ಜಾಗೃತಿ ರಥಕ್ಕೆ ಹಸಿರು ನಿಶಾನೆ ತೋರುವುದರ ಮೂಲಕ ಚಾಲನೆ ನೀಡಿ ಅವರು ಮಾತನಾಡಿದರು.

ಸಮಾಜದಲ್ಲಿ ಅನಿಷ್ಟ ಪದ್ಧತಿ ನಿರ್ಮೂಲನೆ ಆಗಬೇಕೆಂದರೆ ಅದಕ್ಕೆ ಶಿಕ್ಷಣವೊಂದೇ ಮಾರ್ಗವಾಗಿದೆ. ಇದಕ್ಕಾಗಿ ಪೋಷಕರು ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸಬೇಕು.

ಹಿಂದಿನ ಕಾಲದಿಂದಲೂ ಜೀತ ಪದ್ಧತಿ ರೂಢಿಯಲ್ಲಿದೆ, ಮನೆಯಲ್ಲಿ ಹಣಕಾಸಿನ ತೊಂದರೆ ಯಾದರೆ ಚಿಕ್ಕ ಚಿಕ್ಕ ಮಕ್ಕಳನ್ನು ತುಂಬಾ ಅಪಾಯಕಾರಿ ಕೆಲಸಗಳಿಗೆ ಕಳುಹಿಸುತ್ತಾರೆ, ಇದನ್ನು ತಪ್ಪಿಸಬೇಕು. ಇಂತಹ ಪ್ರಕರಣಗಳನ್ನು ಗುರುತಿಸಿ ಸಂಬಂಧಪಟ್ಟ ಅಧಿಕಾರಿಗಳಿಗೆ ಮಾಹಿತಿ ನೀಡಿ ಅದನ್ನು ನಿರ್ಮೂಲನೆ ಮಾಡಬೇಕು. ಇಂತಹ ಪ್ರಕರಣಗಳು ಕಂಡುಬಂದರೆ ಅಂಥವರಿಗೆ ಪುನರ್ವಸತಿ ಕಲ್ಪಿಸಬೇಕು. ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿ ನಿರ್ಮೂಲನೆ ಮಾಡುವುದು ನಮ್ಮೆಲ್ಲರ ಜವಾಬ್ದಾರಿಯಾಗಿದೆ. ಇದಕ್ಕಾಗಿ ಗ್ರಾಮೀಣ ಪ್ರದೇಶದಲ್ಲಿ ಹೆಚ್ಚು ಜಾಗೃತಿ ಮೂಡಿಸುವುದು ಅತ್ಯವಶ್ಯವಿದೆ.

ಸರ್ಕಾರ ಜನ ಕಲ್ಯಾಣಕ್ಕೆ ಸಾಕಷ್ಟು ಯೋಜನೆಗಳನ್ನು ರೂಪಿಸಿದೆ, ಇವುಗಳ ಸದ್ಬಳಕೆ ಮಾಡಿಕೊಳ್ಳುವ ಮೂಲಕ ಆರ್ಥಿಕವಾಗಿ ಸಬಲರಾಗುವಂತೆ ಹೇಳುವುದು ನಮ್ಮ ಕರ್ತವ್ಯ ಎಂದ ಅವರು ಬಾಲ್ಯಾವಸ್ಥೆಯ ಹಾಗೂ ಕಿಶೋರಾವಸ್ಥೆಯ ಕಾರ್ಮಿಕ ಪದ್ಧತಿ ನಿರ್ಮೂಲನಾ ದಿನಾಚರಣೆ ಅಂಗವಾಗಿ ಪ್ರತಿಜ್ಞಾ ವಿಧಿ ಬೋಧಿಸಿದರು.

ಸಹಾಯಕ ಕಾರ್ಮಿಕ ಆಯುಕ್ತ ಅವಿನಾಶ್, ಕಾರ್ಮಿಕ ಅಧಿಕಾರಿ ಇಬ್ರಾಹಿಂ ಸಾಬ್, ಕಾರ್ಮಿಕ ನಿರೀಕ್ಷಕ ರಾಜಪ್ಪ, ನಾಗೇಶ್ ಹಾಗೂ ಯೋಜನಾ ನಿರ್ದೇಶಕರಾದ ಪ್ರಸನ್ನಕುಮಾರ್ ಹಾಗೂ ವಿವಿಧ ಶಾಲೆಯ ಮಕ್ಕಳು ಭಾಗವಹಿಸಿದ್ದರು.

## ಯಲವಟ್ಟಿ ಗ್ರಾಮದ ಜಿ. ಬಸಪ್ಪ ಮೇಷ್ಟ್ರು ನಿಧನ



ಹರಿಹರ ತಾ. ಯಲವಟ್ಟಿ ಗ್ರಾಮದ ನಿವೃತ್ತ ಶಿಕ್ಷಕರಾದ

**ಜಿ. ಬಸಪ್ಪ ಮೇಷ್ಟ್ರು**

(86 ವರ್ಷ)

ಅವರು ದಿನಾಂಕ 10.02.2025ರ ಸೋಮವಾರ ರಾತ್ರಿ 10.10 ನಿಮಿಷಕ್ಕೆ ನಿಧನರಾದರು. ಪತ್ನಿ, ಓರ್ವ ಪುತ್ರ, ಓರ್ವ ಪುತ್ರಿ, ಸೊಸೆ, ಅಳಿಯ, ಮೊಮ್ಮಕ್ಕಳು ಸೇರಿದಂತೆ ಅಪಾರ ಬಂಧು ಬಳಗವನ್ನು ಅಗಲಿರುವ ಮೃತರ ಅಂತ್ಯಕ್ರಿಯೆಯು ದಿನಾಂಕ 11.02.2025ರ ಮಂಗಳವಾರ ಮಧ್ಯಾಹ್ನ 1 ಗಂಟೆಗೆ ಯಲವಟ್ಟಿಯಲ್ಲಿ ನೆರವೇರಲಿದೆ.

ದುಃಖತಪ್ತರು

**ಗೌಡ್ರ ವಂಶಸ್ಥರು ಮತ್ತು ಯಲವಟ್ಟಿ ಗ್ರಾಮಸ್ಥರು ಹಾಗೂ ಬಂಧು ಮಿತ್ರರು.**

## IN THE COURT HON'BLE III ADDL., SENIOR CIVIL JUDGE & JMFC AT DAVANAGERE

O. S. No. 132/2024

**PLAINTIFF:** SMT. YASHODA MOHAN ***VERSES***
**DEFENDANT:** SRI. SUNIL.R.VARNEKAR S/o Ramachandrappa V. Varnekar, Aged about 50 years, R/o # 2595/6, 3rd Main, 3rd Cross, MCC 'A' Block, Davanagere.

**SUMMONS/NOTICEUNDER ORDER-V RULE-20 OF C.P.C.**

Whereas plaintiff has filed the above suit against you the defendant by seeking relief of ejectment, arrears of rent and also such other reliefs before the Hon'ble III Additional Senior Civil Judge & JMFC at Davanagere, in O. S. No. 132/2024. You defendant is hereby directed to appear in this court in persons or by advocate on 12.03.2025 fore noon at 11.00 AM to defend Yourself, failing which the suit be heard and determined in your absence / Ex-parte.

Given under my hand seal of this court on 7th day of Feb. 2025.

**K.G.K swamy**
**S.G Mahaveer**
Advocates, 'LAW SOLUTIONS'
#417/4A, 4B, 1st Floor,
benakeshi plaza, Dixit road,
K.B Extension , Davanagere-1.

By order of the Court
**Chief ministerial officer,**
Prl Senior civil judge & CJM Davanagere.

# ದಾಮ್‌ಕೋಸ್ ಅಧ್ಯಕ್ಷರಾಗಿ ಶಿವಕುಮಾರ್ ಪುನರಾಯ್ಕೆ



ದಾವಣಗೆರೆ, ಫೆ. 10- ದಾವಣಗೆರೆ ಅಡಿಕೆ ಅಭಿವೃದ್ಧಿ ಮತ್ತು ಪರಿಷ್ಕರಣ ಮತ್ತು ಮಾರಾಟ ಸಹಕಾರ ಸಂಘ ನಿಯಮಿತದ (ದಾಮ್‌ಕೋಸ್) ಮುಂದಿನ ಐದು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಬಿ.ಕೆ. ಶಿವಕುಮಾರ್ ಮತ್ತು ಉಪಾಧ್ಯಕ್ಷರಾಗಿ ಹೆಚ್.ಜಿ. ಮಲ್ಲಿಕಾರ್ಜುನ್ ಮತ್ತೊಂದು ಅವಧಿಗೆ ಅವಿರೋಧವಾಗಿ ಪುನರಾಯ್ಕೆಯಾಗಿದ್ದಾರೆ.

ಕೃಷಿ ಉತ್ಪನ್ನ ಮಾರುಕಟ್ಟೆ ಆವರಣದಲ್ಲಿರುವ ದಾಮ್‌ಕೋಸ್ ಆಡಳಿತ ಕಚೇರಿಯಲ್ಲಿ ಸೋಮವಾರ ಎಲ್ಲಾ 12 ನಿರ್ದೇಶಕರ ಸಮ್ಮುಖದಲ್ಲಿ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆಗೆ ಚುನಾವಣೆ ನಡೆಯಿತು. ದಾವಣಗೆರೆ ಉಪ ವಿಭಾಗದ ಸಹಕಾರ ಸಂಘಗಳ ಸಹಾಯಕ ನಿಬಂಧಕರಾದ ಎಸ್. ಮಂಜುಳಾ ಚುನಾವಣಾಧಿಕಾರಿಯಾಗಿದ್ದರು.

ಈ ವೇಳೆ ಸಂಘದ ಸಂಸ್ಥಾಪಕ ಅಧ್ಯಕ್ಷ ಎಚ್. ಜಯ್ಯಣ್ಣ, ಮಾಜಿ ಅಧ್ಯಕ್ಷ ಕೆ.ಸಿ.ಶಿವಕುಮಾರ್, ಮಾಜಿ ನಿರ್ದೇಶಕರಾದ ಜಿ.ಸಿ.ವಾಮದೇವಪ್ಪ, ಎಂ.ಆರ್.ಮಂಜುನಾಥಯ್ಯ, ನಿರ್ದೇಶಕರಾದ ಕೆ.ಸುಧಾ, ಎ.ಜಿ.ವಿಮಲಾಕ್ಷಮ್ಮ, ಎಚ್.ಎಸ್ ಮಂಗಳಗೌರಮ್ಮ, ಜಿ.ಎಸ್.ಬಸವರಾಜ್, ಎಚ್.ಜಿ.ಮರುಳಸಿದ್ದಪ್ಪ, ಆರ್.ಜಿ.ನರೇಂದ್ರ, ಎಂ.ಎಸ್.ಮಲ್ಲಿಕಾರ್ಜುನ್, ಟಿ.ಎಂ.ಮುನಿಯಪ್ಪ, ಬಿ.ಬಸವರಾಜಯ್ಯ, ಕೆ.ಟಿ.ಮಹಾಂತಪ್ಪ, ಕಾರ್ಯದರ್ಶಿ ಶಿವಕುಮಾರ್, ಲಿಂಗರಾಜ್ ಇತರರಿದ್ದರು.

# ವಿಶ್ವ ಕನ್ನಡ ಸಮ್ಮೇಳನಕ್ಕೆ 50 ಲಕ್ಷ: ಪಾಲಿಕೆಗೆ ಕಸಾಪ ಅಧ್ಯಕ್ಷ ವಾಮದೇವಪ್ಪ ಅಭಿನಂದನೆ

ದಾವಣಗೆರೆ, ಫೆ. 10 - ನಗರದಲ್ಲಿ ನಡೆಸಲು ಉದ್ದೇಶಿಸಿರುವ 3ನೇ ವಿಶ್ವ ಕನ್ನಡ ಸಮ್ಮೇಳನಕ್ಕೆ 50 ಲಕ್ಷ ರೂ.ಗಳನ್ನು ಮಹಾನಗರ ಪಾಲಿಕೆಯ ಆಯವ್ಯಯದಲ್ಲಿ ಮೀಸಲಿರಿಸಿ, ಪಾಲಿಕೆ ಆಡಳಿತ ಕೈಗೊಂಡಿರುವ ಕ್ರಮವನನ್ನು ಜಿಲ್ಲಾ ಕನ್ನಡ ಸಾಹಿತ್ಯ ಪರಿಷತ್ ಅಧ್ಯಕ್ಷ ಬಿ.ವಾಮದೇವಪ್ಪ ಸ್ವಾಗತಿಸಿ, ಸಂತಸ ವ್ಯಕ್ತಪಡಿಸಿದ್ದಾರೆ.

ಮೇಯರ್ ಮತ್ತು ಸರ್ವಸದಸ್ಯರು ಹಾಗೂ ಆಯುಕ್ತರಿಗೆ ಅಭಿನಂದನೆ ಸಲ್ಲಿಸಿರುವ ವಾಮದೇವಪ್ಪ, ಪ್ರತಿ ವರ್ಷ ಪಾಲಿಕೆಯಿಂದ ನಡೆಯುವ 3 ದಿನಗಳ ಕಾಲ ಕನ್ನಡ ರಾಜ್ಯೋತ್ಸವದ ಆಚರಣೆಗಾಗಿ 50 ಲಕ್ಷ ರೂ.ಗಳು, ಪಾಲಿಕೆ ಆವರಣದ ಪುಟ್ಟಣ್ಣ ಕಣಗಾಲ್ ವಾದ್ಯ ಮಂಟಪದಲ್ಲಿ ಕಾರ್ಯಕ್ರಮ ನಡೆಸಲು 10 ಲಕ್ಷ ರೂ. ಮತ್ತು ತಾಲ್ಲೂಕು ಸಮ್ಮೇಳನಕ್ಕೆ 25 ಸಾವಿರ ಹಾಗೂ ಜಿಲ್ಲಾ ಸಮ್ಮೇಳನಕ್ಕೆ 50 ಸಾವಿರ ರೂ.ಗಳನ್ನು 2025-26ನೇ ಸಾಲಿನ ಆಯವ್ಯಯದಲ್ಲಿ ಮೀಸಲಿರಿಸಿರುವುದು ಕನ್ನಡಿಗರೆಲ್ಲರೂ ಹೆಮ್ಮೆ ಪಡುವ ವಿಷಯವಾಗಿದೆ ಎಂದು ತಿಳಿಸಿದ್ದಾರೆ.

# ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಶ್ರೀಗಳವರ ಸ್ಮರಣೆ ಶ್ರದ್ಧಾಪೂರ್ವಕ ದಾಸೋಹ ದಿನಾಚರಣೆ

ದಾವಣಗೆರೆ, ಫೆ. 10- ತುಮಕೂರಿನ ಶ್ರೀ ಸಿದ್ಧಗಂಗಾ ಮಠಾಧ್ಯಕ್ಷರೂ, ತ್ರಿವಿಧ ದಾಸೋಹಿಗಳೂ, ನಡೆದಾಡುವ ದೇವರೆಂದೇ ಎಲ್ಲರ ಮನಸ್ಸಿನಲ್ಲಿ ನೆಲೆ ನಿಂತಿರುವ ಮಹಾ ತಪಸ್ವಿ ಶ್ರೀ ಶಿವಕುಮಾರ ಮಹಾಸ್ವಾಮಿಗಳವರ 6ನೇ ಪುಣ್ಯಸ್ಮರಣೋತ್ಸವ ಕಾರ್ಯಕ್ರಮವನ್ನು ನಗರದ ಶ್ರೀ ಸಿದ್ಧಗಂಗಾ ವಿದ್ಯಾಸಂಸ್ಥೆಯಲ್ಲಿ ಶ್ರದ್ಧಾ - ಭಕ್ತಿಯಿಂದ ಆಚರಿಸಲಾಯಿತು.

ಭಕ್ತಿ ಗೀತೆಗಳ ಹಿನ್ನೆಲೆಯಲ್ಲಿ ಮಕ್ಕಳು ಶ್ರೀಗಳವರ ಭಾವಚಿತ್ರಕ್ಕೆ ಮತ್ತು ಪಾದುಕೆಗಳಿಗೆ ನಮಿಸಿ ಬಿಲ್ವಪತ್ರೆಗಳನ್ನು ಸಮರ್ಪಿಸಿದರು. ಸಂಸ್ಥೆಯ ಕಾರ್ಯದರ್ಶಿ ಡಿ.ಎಸ್. ಹೇಮಂತ್ ನೇತೃತ್ವದಲ್ಲಿ ಎಲ್ಲಾ ಮಕ್ಕಳಿಗೆ ಫಲಹಾರದ ವ್ಯವಸ್ಥೆ ಏರ್ಪಡಿಸಲಾಗಿತ್ತು.

ಸ್ವಾಮೀಜಿಯವರ ಸೇವಾದೀಕ್ಷೆ ಬಗ್ಗೆ ಸಂಸ್ಥೆಯ ಮುಖ್ಯಸ್ಥರಾದ ಶ್ರೀಮತಿ ಜಸ್ಟಿನ್ ಡಿಸೌಜ ಅವರು ಮಕ್ಕಳಿಗೆ ತಿಳಿಸಿಕೊಟ್ಟರು. ಸಂಸ್ಥೆಯ ಸಂಸ್ಥಾಪಕರಾದ ಶಿವಣ್ಣನವರು ಗುರುಗಳ ಬಗ್ಗೆ ಹೊಂದಿದ್ದ ಅನನ್ಯ ಭಕ್ತಿಭಾವವನ್ನು ವಿವರಿಸಿದರು.

# ಮಾಲಾಧಾರಿಗಳು ಸ್ಪಷ್ಟ-ನಿರ್ದಿಷ್ಟವಾಗಿ ನಡೆದುಕೊಳ್ಳಬೇಕು

## ಹರಪನಹಳ್ಳಿ ತಾಲ್ಲೂಕಿನಲ್ಲಿ ಸಂತ ಶ್ರೀ ಸೇವಾಲಾಲ್ ಮಹಾರಾಜರ 25 ನೇ ವರ್ಷದ ಮಾಲಾ ಧಾರಿಗಳ ಪಾದಯಾತ್ರೆ ಆರಂಭ



ಹರಪನಹಳ್ಳಿ, ಫೆ. 10- ತಾಂಡಾದ ಯುವಕರು ದುಶ್ಚಟದಿಂದ ದೂರ ಇದ್ದಲ್ಲಿ, ನಿಮ್ಮ ಕುಟುಂಬದ ಜೀವನವನ್ನು ಆರ್ಥಿಕವಾಗಿ ಸದೃಢಗೊಳಿಸುವುದಕ್ಕೆ ಸಾಧ್ಯವಾಗುತ್ತದೆ ಎಂದು ಮುಖಂಡ ಎಂ.ಪಿ. ನಾಯ್ಕ ಹೇಳಿದರು.

ತಾಲ್ಲೂಕಿನ ಮಾಡಲಗೇರಿ ತಾಂಡಾದಲ್ಲಿ ಸಂತ ಶ್ರೀ ಸೇವಾಲಾಲ್ ಮಹಾರಾಜರ 25 ನೇ ವರ್ಷದ ಮಾಲಾ ಧಾರಿಗಳ ಪಾದಯಾತ್ರೆ ದಂಡಿಯ ವೃತ್ತದಲ್ಲಿ ಭಾಗವಹಿಸಿ ಮಾತನಾಡಿದ ಅವರು, ಮಾಲಾಧಾರಿಗಳು ಸ್ಪಷ್ಟ ಮತ್ತು ನಿರ್ದಿಷ್ಟವಾಗಿ ನಡೆದುಕೊಳ್ಳಬೇಕು. ಯಾವುದೇ ದುಶ್ಚಟಕ್ಕೆ ಬಲಿಯಾಗಿ, ನಿಮ್ಮ ಜೀವನವನ್ನು ಹಾಳು ಮಾಡಿಕೊಳ್ಳ ಬಾರದು ಎಂದರು.

ಸಮುದಾಯದ ಹಿರಿಯರು ಯುವಕರ ಬಗ್ಗೆ ಕಾಳಜಿ ವಹಿಸಿ. ನಿಮ್ಮ ಮಕ್ಕಳನ್ನು ವಿದ್ಯಾವಂತರನ್ನು ಮತ್ತು ಸೃಜನಶೀಲ ವ್ಯಕ್ತಿಯನ್ನಾಗಿಸಲು ಮಕ್ಕಳ ಹಿತದೃಷ್ಟಿಯಿಂದ ಆರ್ಥಿಕವಾಗಿ ಸದೃಢಗೊಳಿಸಲು ತಂದೆ-ತಾಯಿಗಳು ಹೆಚ್ಚಿನ ಗಮನ ಹರಿಸಬೇಕು ಎಂದು ಕಿವಿಮಾತು ಹೇಳಿದರು.

ಇದೇ ದಿನಾಂಕ 14 ರಂದು ನಡೆಯಲಿರುವ ಸಂತ ಶ್ರೀ ಸೇವಾಲಾಲ್ ಮಹಾರಾಜ 286ನೇ ಜಯಂತಿಯನ್ನು ಅದ್ದೂರಿಯಾಗಿ ಆಚರಿಸಲು ಹೊನ್ನಾಳಿ ತಾಲ್ಲೂಕು ಸೂರನಗೊಂಡಕೊಪ್ಪದಲ್ಲಿ ಲಕ್ಷಾಂತರ ಭಕ್ತರು ಸೇರಲಿದ್ದಾರೆ. ಎಲ್ಲರೂ ಜಯಂತಿಗೆ ಬಂದು ಭಾಗವಹಿಸಿ ಕಾರ್ಯಕ್ರಮ ಗಳನ್ನು ಯಶಸ್ವಿಗೊಳಿಸಿ ಎಂದು ತಾಲ್ಲೂಕಿನ ಎಲ್ಲಾ ತಾಂಡಾದ ಭಕ್ತರಿಗೆ ಕರೆ ನೀಡಿದರು.

ಈ ಸಂದರ್ಭದಲ್ಲಿ ಡಾವೋಗೇಮ್ಯಾನಾಯ್ಕ, ಕಾರಬಾರಿ ಯಂಕ್ಯಾನಾಯ್ಕ, ಗ್ರಾ.ಪಂ.ಸದಸ್ಯ ಎಂ. ಹಾಲೇಶ್ ನಾಯ್ಕ, ಗ್ರಾಮ ಪಂಚಾಯತಿ ಮಾಜಿ ಅಧ್ಯಕ್ಷ ನಾಗೇಂದ್ರ ನಾಯ್ಕ, ಗ್ರಾ.ಪಂ. ಸದಸ್ಯ ಆರ್. ಮಲ್ಲೇಶ್ ನಾಯ್ಕ, ಮುಖಂಡರಾದ ಎಂ. ಕೊಟ್ರೇಶ್ ನಾಯ್ಕ, ವಿ. ಮಲ್ಲೇಶ್ ನಾಯ್ಕ, ಪೂಜಾರಿ ಶೇಖರ್ ನಾಯ್ಕ, ವಿ. ರಾಮನಾಯ್ಕ, ಆರ್. ಚೆನ್ನವೀರನಾಯ್ಕ, ಲಂಕೇಶ್ ನಾಯ್ಕ, ಎಂ.ಎಸ್.ನಾಯ್ಕ, ಡಿ. ರಮೇಶ್ ನಾಯ್ಕ, ವಿ.ಗಣೇಶ್ ನಾಯ್ಕ, ಹೋಬ್ಯಾನಾಯ್ಕ, ಕೃಷ್ಣನಾಯ್ಕ, ಎಂ. ಪ್ರವೀಣ್ ಕುಮಾರ್, ವಿ.ಸಂತೋಷನಾಯ್ಕ, ಹೆಚ್. ಈರನಾಯ್ಕ, ಡಿ. ಮಲ್ಲೇಶ್ ನಾಯ್ಕ, ಎಸ್.ಜೇತಾನಾಯ್ಕ, ಎಂ. ದೇವೆಂದ್ರ ನಾಯ್ಕ ಸೇರಿದಂತೆ ಇತರರು ಇದ್ದರು.

# ಮಠ, ಸ್ವಾಮಿಗಳು ಭಕ್ತ ಸಂಬಂಧಿಯಾಗಬೇಕು

(1ನೇ ಪುಟದಿಂದ) ನಡೆಯುವಂತಿರಬೇಕು. ಹಾಗಾದಲ್ಲಿ ಮಠದ, ಮಠದ ಭಕ್ತರ ಉದ್ಧಾರ ಸಾಧ್ಯವಾಗಲಿದೆ ಎಂದು ಶ್ರೀಗಳು ನುಡಿದರು.

ಘನತೆ, ಗೌರವ, ಸಭ್ಯತೆ, ಹೃದಯವಂತಿಕೆಯ ಬದುಕು, ಸರಳತೆ, ಸಜ್ಜನಿಕೆಯ ಸಾಗರದಂತೆ ಗುರು ಇರಬೇಕು. ಬಸವರಾಜ ದೇಶಿಕೇಂದ್ರ ಶ್ರೀಗಳು ಹಾಕಿಕೊಟ್ಟ ಮಾರ್ಗದಲ್ಲಿ ನಡೆದು ಬಹಳಷ್ಟು ವಿದ್ವತ್ತು ಪಡೆದು, ಅಪಾರ ಜ್ಞಾನ ಗಳಿಸಿ ಮಠದ ಘನತೆ ಹೆಚ್ಚಿಸುವಲ್ಲಿ ನೂತನ ಸಿದ್ದಾರೂಢ ಶ್ರೀಗಳು ಬಹಳಷ್ಟು ಶ್ರಮಪಡಬೇಕು ಎಂದು ಡಾ. ಪಂಡಿತಾರಾಧ್ಯ ಶ್ರೀಗಳು ನುಡಿದರು.

ಕಾಗಿನಲೆ ಕನಕ ಗುರುಪೀಠದ ನಿರಂಜನಾನಂದಪುರಿ ಶ್ರೀಗಳು, ಗದಗ ಶಿವಾನಂದ ಮಠದ ಸದಾಶಿವಾನಂದ ಸ್ವಾಮಿಗಳು, ಕುಳ್ಳೂರು ಬಸವಾನಂದ ಸ್ವಾಮಿಗಳು, ಹೊನ್ನಾಳಿ ಡಾ.ಒಡೆಯರ ಚನ್ನಮಲ್ಲಿಕಾರ್ಜುನ ಮಹಾಸ್ವಾಮೀಜಿ, ಆವರಗೊಳ್ಳ ಓಂಕಾರ ಶ್ರೀಗಳು, ಗಂಗಾಪೂರ ಮರುಳಶಂಕರ ಶ್ರೀಗಳು, ತುಮ್ಮಿನಕಟ್ಟಿ ಪ್ರಭುಲಿಂಗ ಶ್ರೀಗಳು, ತೆಲಗಿ ಪೂರ್ಣಾನಂದ ಶ್ರೀಗಳು, ಒಳ್ಳೆ ಕುರುಬನ ದೇವಾಲಯದ ಫಾದರ್ ವಿವೇಕಪಾಲ ಸಿ.ಕೆ. ಮೌಲಾನಾಬೂಸ್ ಖ್ಯಾನ ಮದನಿ, ಉಪಸಭಾಪತಿ ರುದ್ರಪ್ಪ ಲಮಾಣಿ ಮತ್ತಿತರರು ಇದ್ದರು.

### ಭಕ್ತರೆಲ್ಲರನ್ನು ಸಮಭಾವದಿಂದ ನೋಡುವ ಸ್ವಾಮೀಜಿಯಾಗಬೇಕು

ನಾಡಿನಲ್ಲಿ ಮಠಗಳಿಗೆ ಕೊರತೆಯಿಲ್ಲ. ಮಠಗಳಿಗೆ, ಸ್ವಾಮೀಜಿಗಳಿಗೆ ಭಕ್ತಿ ಸಲ್ಲಿಸುವ ಭಕ್ತರು ಅಪಾರ ಸಂಖ್ಯೆಯಲಿದ್ದಾರೆ. ಸ್ವಾಮಿಗಳನ್ನು ಪರೀಕ್ಷಿಸದೇ ಅವರು ಹಾಕಿದ ಕಾವಿ ಬಟ್ಟೆಯ ಲಾಂಛನಕ್ಕೆ ಗೌರವ ಕೊಡುವ ಭಕ್ತರು ಅತ್ಯಧಿಕ ಸಂಖ್ಯೆಯಲ್ಲಿದ್ದಾರೆ. ಅವರು ಸಲ್ಲಿಸುವ ಭಕ್ತಿಗೆ ಬೆಲೆ ಕೊಡುವ ಸ್ವಾಮೀಜಿಯಾಗಬೇಕು. ಭಕ್ತರಲ್ಲಿ ಶ್ರೀಮಂತ, ಬಡವ, ಜಾತಿ, ಅಧಿಕಾರ, ಅಂತಸ್ತುಗಳನ್ನು ನೋಡದೆ ಮಠಕ್ಕೆ ಬರುವ ಭಕ್ತರೆಲ್ಲರನ್ನು ಸಮಭಾವದಿಂದ ನೋಡುವ ಸ್ವಾಮೀಜಿಯಾಗಬೇಕು.

**- ಪಂಡಿತಾರಾಧ್ಯ ಶ್ರೀಗಳು, ಸಾಣೇಹಳ್ಳಿ**

# ನಾಯಕತ್ವ ವಹಿಸಲು ರಾಜ್ಯಕ್ಕೆ ಬನ್ನಿ.!

(1ನೇ ಪುಟದಿಂದ) ಎಚ್ಚರಿಕೆಯನ್ನೂ ನೀಡಿದ್ದರು.

ಇದೀಗ ಖರ್ಗೆ ಅವರ ಮನವೊಲಿಸಿ ಸಮಾವೇಶ ನಡೆಸಲು ಸಚಿವರುಗಳು ದೆಹಲಿ ದಂಡಯಾತ್ರೆ ಕೈಗೊಳ್ಳುತ್ತಿದ್ದಾರೆ.

ಮುಡಾ ಹಗರಣವನ್ನು ಸಿಬಿಐಗೆ ವಹಿಸಲು ಹೈಕೋರ್ಟ್ ನಿರಾಕರಿಸುತ್ತಿದ್ದಂತೆ, ರಾಜ್ಯ ಕಾಂಗ್ರೆಸ್ ರಾಜಕಾರಣದಲ್ಲಿ ಈ ಬೆಳವಣಿಗೆ ಕಂಡುಬರುತ್ತಿದೆ.

# ಹರಪನಹಳ್ಳಿ : ಆದರ್ಶ ಸೌಹಾರ್ದ ಬ್ಯಾಂಕ್‌ಗೆ ಅಧ್ಯಕ್ಷರಾಗಿ ನಂಜನಗೌಡ್ರು

## ಉಪಾಧ್ಯಕ್ಷರಾಗಿ ಎಚ್.ಎ. ವೇಣುಗೋಪಾಲ



ಹರಪನಹಳ್ಳಿ, ಫೆ. 10- ಪಟ್ಟಣದ ಆದರ್ಶ ಸೌಹಾರ್ದ ಸಹಕಾರಿ ಬ್ಯಾಂಕಿನ ಐದು ವರ್ಷಗಳ ಅವಧಿಗೆ ಅಧ್ಯಕ್ಷರಾಗಿ ಜಿ. ನಂಜನಗೌಡ್ರು, ಉಪಾಧ್ಯಕ್ಷರಾಗಿ ಎಚ್.ಎ. ವೇಣುಗೋಪಾಲ ಅವಿರೋಧವಾಗಿ ಆಯ್ಕೆಯಾಗಿದ್ದಾರೆ.

ಉಳಿದಂತೆ ಆಡಳಿತ ಮಂಡಳಿಯ ನಿರ್ದೇಶಕರುಗಳಾಗಿ ವೀರಭದ್ರಯ್ಯ ಎಸ್.ಎಂ., ಸುಧಾ ಜಿ.ಎಂ., ಮಂಜುನಾಥ ಕೆ.ಎಂ., ಪ್ರಕಾಶ ಬಿ.ಕೆ., ಭ್ರಮರಾಂಭ ಕೆ.ಸಿ., ಅಜ್ಜಣ್ಣ, ಎಂ.ಬಿ. ರವಿಕುಮಾರ್, ಹೆಚ್. ದೇವರಾಜ, ಮಂಜುಳಾ ಕೆ. ಎಸ್., ರೇಖಾ ಟಿ.ಎಚ್.ಎಂ., ಸಹನ ಗೊಂಗಡಿ ಆಯ್ಕೆಯಾಗಿದ್ದಾರೆ

# ಯುಜಿಸಿ ಕರಡು ನಿಯಮಾವಳಿ ಕೂಡಲೇ ಹಿಂಪಡೆಯಲು ಎಐಡಿಎಸ್‌ಓ ಆಗ್ರಹ

ದಾವಣಗೆರೆ, ಫೆ.10- ಇತ್ತೀಚೆಗೆ ರೂಪಿಸಲಾಗಿರುವ ಯುಜಿಸಿ 2025 ಕರಡು ನಿಯಮಾವಳಿಗಳು ಶಿಕ್ಷಣ ವಿರೋಧಿ, ಜನ ವಿರೋಧಿ ಹಾಗೂ ಅಪ್ರಜಾತಾಂತ್ರಿಕವಾಗಿವೆ ಎಂದು ಎಐಡಿಎಸ್‌ಓ ಟೀಕಿಸಿದೆ.

ಶಿಕ್ಷಣ ಕ್ಷೇತ್ರದ ಹೊರಗಿನವರನ್ನು ವಿಶ್ವವಿದ್ಯಾಲಯಗಳ ಕುಲಪತಿಗಳನ್ನಾಗಿ ಮಾಡುವ ಅಪಾಯಕಾರಿ ನಿಯಮಗಳನ್ನು ಯುಜಿಸಿ ರೂಪಿಸಿದೆ. ಉದ್ಯಮ, ಸಾರ್ವಜನಿಕ ಆಡಳಿತ, ನೀತಿ ನಿರೂಪಣೆ ಅಥವಾ ಸರ್ಕಾರಿ ಸ್ವಾಮ್ಯದ ಸಂಸ್ಥೆಗಳ ಹಿರಿಯ ಅಧಿಕಾರಿ ಹುದ್ದೆಯಲ್ಲಿ ಕನಿಷ್ಠ 10 ವರ್ಷ ಅನುಭವದ ಜೊತೆಗೆ ಶೈಕ್ಷಣಿಕವಾಗಿ ಮಹತ್ವದ ಕೊಡುಗೆ ನೀಡಿದವರನ್ನು ವಿಶ್ವವಿದ್ಯಾಲಯದ ಕುಲಪತಿಯನ್ನಾಗಿ ಮಾಡಬಹುದು ಎಂದು ಹೇಳಲಾಗಿದೆ.

ಎಂ.ಇ ಅಥವಾ ಎಂ.ಟೆಕ್ ನಲ್ಲಿ ಕನಿಷ್ಠ ಶೇಕಡ 55 ಅಂಕ ಪಡೆದವರಿಗೆ ರಾಷ್ಟ್ರೀಯ ಅರ್ಹತಾ ಪರೀಕ್ಷೆಯಿಂದ ವಿನಾಯಿತಿ ನೀಡಿ ನೇರವಾಗಿ ಸಹಾಯಕ ಪ್ರಾಧ್ಯಾಪಕ ಹುದ್ದೆಗೆ ನೇಮಕ ಮಾಡುವ ನಿಯಮವನ್ನು ಕೂಡ ಕರಡಿನಲ್ಲಿ ಸೂಚಿಸಲಾಗಿದೆ. ಕೂಡಲೇ ಈ ಕರಡನ್ನು ಹಿಂಪಡೆಯಬೇಕು ಎಂದು ಎಐಡಿಎಸ್‌ಓ ಆಗ್ರಹಿಸಿದೆ.

# ಮಹಾ ಕುಂಭ ಆಸ್ಪತ್ರೆಯಲ್ಲಿ 12 ಮಕ್ಕಳ ಜನನ

ಮಹಾಕುಂಭ ನಗರ, ಫೆ. 10 - ಮಹಾಕುಂಭ ಮೇಳದ ಪ್ರದೇಶದಲ್ಲಿ ಸ್ಥಾಪಿಸಲಾಗಿರುವ ಕೇಂದ್ರ ಆಸ್ಪತ್ರೆಯಲ್ಲಿ ಇದುವರೆಗೂ 12 ಮಕ್ಕಳು ಜನಿಸಿವೆ. ಈ ಮಕ್ಕಳಿಗೆ ಗಂಗಾ, ಯಮುನಾ, ವಸಂತ, ವಸಂತಿ ಹಾಗೂ ಕುಂಭ ಮುಂತಾದ ಹೆಸರುಗಳನ್ನು ಇಡಲಾಗಿದೆ.

ಭಾನುವಾರ ರಾತ್ರಿ ಮಹಾ ಕುಂಭ ಆಸ್ಪತ್ರೆಯಲ್ಲಿ 12ನೇ ಮಗುವಿನ ಜನನವಾಗಿದೆ. ಎಲ್ಲಾ 12 ಹೆರಿಗೆಗಳು ಸಾಮಾನ್ಯವಾಗಿವೆ ಎಂದು ಆಸ್ಪತ್ರೆಯ ಮುಖ್ಯ ವೈದ್ಯಕೀಯ ಅಧೀಕ್ಷಕ ಡಾ. ಮನೋಜ್ ಕೌಶಿಕ್ ತಿಳಿಸಿದ್ದಾರೆ

ಫುಲ್‌ಪುರದ ನೇಹಾ ಸಿಂಗ್ ಅವರಿಗೆ ಭಾನುವಾರ ಮಗು ಜನಿಸಿದೆ. ಈ ಮಗುವಿಗೆ ಕುಂಭ ಎಂಬ ಹೆಸರಿಡಲು ತಂದೆ ದೀಪಕ್ ಬಯಸಿದ್ದರು.

ಡಿಸೆಂಬರ್ 29ರಂದು ಜನಿಸಿದ ಮಗುವಿಗೆ ಈಗಾಗಲೇ ಕುಂಭ ಎಂಬ ಹೆಸರಿಡಲಾಗಿದೆ. ಹೀಗಾಗಿ ಆಸ್ಪತ್ರೆಯವರು ತಾವಾಗಿಯೇ ಕುಂಭ ಎಂಬ ಹೆಸರು ನೀಡಲು ಬರುವುದಿಲ್ಲ ಎಂದು ಆಸ್ಪತ್ರೆಯ ಸಿಬ್ಬಂದಿ ತಿಳಿಸಿದರು.

ಆಸ್ಪತ್ರೆಯವರು ಈ ಹೆಸರು ಇಡದಿದ್ದರೆ ಏನಂತೆ ನಾನೇ ನನ್ನ ಮಗನಿಗೆ ಕುಂಭ ಎಂಬ ಹೆಸರಿಡುತ್ತೇನೆ ಎಂದು ದೀಪಕ್ ಹೇಳಿದ್ದಾರೆ.

ಕುಂಭಮೇಳದಲ್ಲಿ ಜನಿಸುವ ಎಲ್ಲಾ ಮಕ್ಕಳಿಗೆ ಆಸ್ಪತ್ರೆ ವತಿಯಿಂದ ಕುಂಭಮೇಳಕ್ಕೆ ಸಂಬಂಧಿಸಿದ ಹೆಸರುಗಳನ್ನು ಸಾಂಕೇತಿಕವಾಗಿ ನೀಡಲಾಗುತ್ತದೆ. ಭೋಲೆನಾಥ್, ಭಜರಂಗಿ, ನಂದಿ, ಯಮುನಾ ಮತ್ತಿತರೆ ಹೆಸರುಗಳನ್ನು ಮಕ್ಕಳಿಗೆ ನೀಡಲಾಗಿದೆ.

ಫೆಬ್ರವರಿ ಮೂರರ ವಸಂತ ಪಂಚಮಿ ದಿನದಂದು ಒಂದು ಗಂಡು ಹಾಗೂ ಒಂದು ಹೆಣ್ಣು ಮಗು ಜನಿಸಿತ್ತು. ಗಂಡು ಮಗುವಿಗೆ ವಸಂತ ಹಾಗೂ ಹೆಣ್ಣು ಮಗುವಿಗೆ ವಸಂತಿ ಎಂದು ಹೆಸರಿಡಲಾಗಿದೆ.

ಹಲವಾರು ಮಹಿಳೆಯರು ಮಹಾ ಕುಂಭಮೇಳದಲ್ಲಿ ಹೆರಿಗೆಯಾಗಲಿ ಎಂದು ಬಯಸುತ್ತಾರೆ. ಕುಂಭಮೇಳದಲ್ಲಿ ಹೆರಿಗೆ ಆದರೆ ಮಗುವಿಗೆ ಅದೃಷ್ಟ ದೊರೆಯುತ್ತದೆ ಎಂಬ ನಂಬಿಕೆ ಇದೆ.

ಮಧ್ಯ ಪ್ರದೇಶದ ಗ್ವಾಲಿಯರ್‌ನ ಮಹಿಳೆಯೊಬ್ಬರು ಘಾಟ್‌ನಲ್ಲಿ ಸ್ನಾನಕ್ಕೆ ತೆರಳಿದಾಗ ಹೆರಿಗೆ ನೋವು ಬಂದಿತ್ತು. ತಕ್ಷಣವೇ ಅವರನ್ನು ಆಂಬ್ಯುಲೆನ್ಸ್ ಮೂಲಕ ಆಸ್ಪತ್ರೆಗೆ ಕರೆತರಲಾಯಿತು. ಆಗ ಹೆಣ್ಣು ಮಗು ಜನಿಸಿದ್ದು, ಕುಟುಂಬದವರು ಸರಸ್ವತಿ ಎಂಬ ಹೆಸರಿಟ್ಟಿದ್ದಾರೆ.

ಜನವರಿ 13ರಂದು ಕುಂಭಮೇಳ ಆರಂಭವಾಗಿದ್ದು, ಅದು ಫೆಬ್ರವರಿ 26 ರ ವರೆಗೆ ಮುಂದುವರೆಯಲಿದೆ. ಆದರೆ 2024ರ ಡಿಸೆಂಬರ್ ಆರಂಭದಿಂದಲೇ ಯಾತ್ರಿಗಳು ಕುಂಭಮೇಳಕ್ಕೆ ಬರಲು ಆಗಮಿಸಿದ್ದರು.

ಡಿಸೆಂಬರ್ 29 ರಂದು ಕೌಶಾಂಬಿಯ ಸೋನಂ ಅವರು ಗಂಡು ಮಗುವಿಗೆ ಜನ್ಮ ನೀಡಿದ್ದರು. ಈ ಮಗುವಿಗೆ ಕುಂಭ ಎಂಬ ಹೆಸರಿಡಲಾಗಿತ್ತು.

# ಪಂಪ್‌ಸೆಟ್ ತೆರವು : ನಿಷೇಧಾಜ್ಞೆ

(1ನೇ ಪುಟದಿಂದ) ಕಂದಾಯ ನಿರೀಕ್ಷಕ ಆನಂದ್, ಗ್ರಾಮ ಆಡಳಿತಾಧಿಕಾರಿಗಳಾದ ಅಣ್ಣಪ್ಪ, ರಾಮಕೃಷ್ಣ, ಷರೀಫ್ ಮತ್ತು ಬೆಸ್ಕಾಂ, ನೀರಾವರಿ, ಕಂದಾಯ ,ಪೊಲೀಸ್ ಇಲಾಖೆಗಳ ಸಿಬ್ಬಂದಿಗಳು ಇದ್ದರು.



**ಗೇಜ್ ಕುಸಿತ :** ಕೊಮಾರನಹಳ್ಳಿ ಬಳಿಯ ಮುಖ್ಯ ನಾಲೆಯಲ್ಲಿ ಮಧ್ಯಾಹ್ನದ ವೇಳೆಗೆ 4.3 ಅಡಿ ಇದ್ದರೆ ಕೊನೆ ಭಾಗಕ್ಕೆ ನೀರು ಹರಿಯೋದಿಲ್ಲ ಎಂಬುದು ನೀರಗಂಟಿಗಳ ಅಭಿಪ್ರಾಯವಾಗಿದೆ. ಕೊನೆ ಭಾಗದ ಭತ್ತದ ಗದ್ದೆಗಳಿಗೆ ನೀರಿಲ್ಲ ಎಂದರೆ ತೋಟಗಳಿಗೆ ನೀರು ದೊರೆಯುವುದು ಕನಸಿನ ಮಾತು ಎಂದು ರೈತ ಪ್ರಭುಗೌಡ ಬೇಸರ ವ್ಯಕ್ತಪಡಿಸಿದರು.

ಭದ್ರಾ ಕಾಲುವೆಗಳಿಗೆ ಅಳವಡಿಸಿರುವ ಅಕ್ರಮ ಪಂಪ್‌ಸೆಟ್‌ಗಳನ್ನು ತೆರವುಗೊಳಿಸಲು ಜಿಲ್ಲಾಧಿಕಾರಿ ಗಂಗಾಧರಸ್ವಾಮಿ ಅವರು ಅಧಿಕಾರಿಗಳ ತಂಡವನ್ನು ರಚಿಸಿದ್ದಾರೆ. ಈ ಹಿನ್ನೆಲೆಯಲ್ಲಿ ಹರಿಹರ ತಹಶೀಲ್ದಾರ್ ಗುರುಬಸವರಾಜ್ ಅವರು ಹರಿಹರ ತಾಲ್ಲೂಕಿನ ನಾಲಾ ವ್ಯಾಪ್ತಿಯಲ್ಲಿ 144ನೇ ಸೆಕ್ಷನ್ ಅಡಿ ನಿಷೇಧಾಜ್ಞೆ ಜಾರಿ ಮಾಡಿ ಆದೇಶ ಹೊರಡಿಸಿದ್ದಾರೆ.

# 'ಸಾಮಾಜಿಕ ಮಾಧ್ಯಮ' ಜನಹಿತಕ್ಕಾಗಿರಲಿ

(1ನೇ ಪುಟದಿಂದ) ಸಾಂಸಾರಿಕೆ ಜೀವನ ಸುಗಮವಾಗಿ ನಡೆಯು ತ್ತದೆ ಎಂದರು. ಮದುವೆ ಕೇವಲ ದೈಹಿಕ ಆಕರ್ಷಣೆ ಆಗಬಾ ರದು. ಅದೊಂದು ಆತ್ಮದ ಆಕರ್ಷಣೆಯಾಗಬೇಕು. ಪ್ರೀತಿ-ವಿಶ್ವಾಸ, ಪರಸ್ಪರ ಅರ್ಥಮಾಡಿಕೊಂಡು ಜೀವನ ಸಾಗಿಸಬೇಕು. ಮೊಬೈಲ್ ನಂತಹ ಯಂತ್ರಗಳ ದುರ್ಬಳಕೆಯಿಂದ ಸಂಸಾರ ಹಾಳು ಮಾಡಿಕೊಳ್ಳದಿರಿ. ಯಂತ್ರಗಳ ಸದುಪಯೋಗ ಪಡಿಸಿಕೊಳ್ಳಿ ಎಂದು ಕರೆ ನೀಡಿದರು. ಬೆಳೆ ನಷ್ಟ ಪರಿಹಾರ ನೀಡುವ ತಂತ್ರಾಂಶ ರೂಪಿಸುವಲ್ಲಿ ರಾಜ್ಯ ಸರ್ಕಾರದ ಜೊತೆ ಕೈಜೋಡಿಸಿ, ಅವರಿಗೆ ಸಹಕಾರ ನೀಡಿದ್ದರಿಂದಲೇ ಭೂಮಿ ಆನ್‌ಲೈನ್ ಯೋಜನೆ ಮೂಲಕ ರೈತರ ಖಾತೆ ನೇರವಾಗಿ 1630 ಕೋಟಿ ರೂ. ಪರಿಹಾರ ಹಣ ಜಮೆ ಆಗಲು ಸಾಧ್ಯವಾಯಿತು ಎಂದು ಹೇಳಿದರು.

# ಲಡ್ಡು ಕಲಬೆರಕೆ : ನಾಲ್ವರು ಕಸ್ಟಡಿಗೆ

(1ನೇ ಪುಟದಿಂದ) ಪ್ರತಿಯೊಂದು ಹಂತದಲ್ಲೂ ನಿಯಮಗಳ ಗಂಭೀರ ಉಲ್ಲಂಘನೆಯಾಗಿದೆ ಎಂದು ಆರೋಪಿಸಲಾಗಿತ್ತು.

ಈ ಹಿನ್ನೆಲೆಯಲ್ಲಿ ಪ್ರಕರಣದ ತನಿಖೆಗಾಗಿ ಸುಪ್ರೀಂ ಕೋರ್ಟ್ ವಿಶೇಷ ತನಿಖಾ ತಂಡವನ್ನು ರಚಿಸಿತ್ತು. ವೈಷ್ಣವಿ ಡೈರಿಯ ಅಧಿಕಾರಿಗಳು ಎಆರ್ ಡೈರಿ ಹೆಸರಿನಲ್ಲಿ ತುಪ್ಪ ಪೂರೈಕೆಯ ಟೆಂಡರ್ ಪಡೆದಿದ್ದರು. ಇವರು ಟೆಂಡರ್ ಪ್ರಕ್ರಿಯೆ ವೇಳೆ ನಕಲಿ ದಾಖಲೆಗಳನ್ನು ಸೃಷ್ಟಿಸಿದ್ದರು ಎಂದು ಆರೋಪಿಸಲಾಗಿದೆ

ತಾನು ಭೋಲೆ ಬಾಬಾ ಡೈರಿಯಿಂದ ತುಪ್ಪ ಪಡೆದಿರುವದಾಗಿ ವೈಷ್ಣವಿ ಡೈರಿ ಸುಳ್ಳು ದಾಖಲೆ ಸೃಷ್ಟಿಸಿತ್ತು. ತಿರುಮಲ ತಿರುಪತಿ ದೇವಸ್ಥಾನ ಮಂಡಳಿಯ ಬೇಡಿಕೆಗೆ ಅನುಗುಣವಾಗಿ ತುಪ್ಪ ಪೂರೈಸಲು ಸಾಧ್ಯವಾಗದೇ ಇದ್ದಾಗ ವೈಷ್ಣವಿ ಡೈರಿ ಈ ಕೃತ್ಯ ಎಸಗಿತ್ತು ಎಂದು ಮೂಲಗಳು ತಿಳಿಸಿವೆ.

# ಜನಗಣತಿಗೆ ಒತ್ತಾಯ

(1ನೇ ಪುಟದಿಂದ) ಭಾರತದ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಜನಗಣತಿ 4 ವರ್ಷಕ್ಕೂ ಹೆಚ್ಚು ಕಾಲ ವಿಳಂಬವಾಗಿದೆ. 2021ರಲ್ಲಿ ಗಣತಿ ನಡೆಸಬೇಕಿತ್ತು. ಆದರೆ ಗಣತಿ ಯಾವಾಗ ನಡೆಯಲಿದೆ ಎಂಬ ಬಗ್ಗೆ ಸ್ಪಷ್ಟನೆ ಇಲ್ಲ ಎಂದವರು ಹೇಳಿದರು.


**ಸೈಟ್ ಮಾರಾಟಕ್ಕಿದೆ**
ಶಾಮನೂರು ಶಿವ - ಪಾರ್ವತಿ ಬಡಾವಣೆ, 5ನೇ ಮುಖ್ಯ ರಸ್ತೆಯಲ್ಲಿ ಉತ್ತರಾಭಿಮುಖವಾಗಿರುವ 30x50 ಅಳತೆಯುಳ್ಳ ಸೈಟ್ ಮಾರಾಟಕ್ಕಿದೆ. ಸಂಪರ್ಕಿಸಿ :
99862-02299

**ಮನೆ ಬಾಡಿಗೆಗೆ ಇದೆ**
ಹೊಸ ಕೋರ್ಟ್ ಹಿಂಭಾಗ ಎ ಬ್ಲಾಕ್ 5ನೇ ಕ್ರಾಸ್ ಪಾರ್ಕ್ ಬಳಿ #21, 2ನೇ ಮಹಡಿ ಅಲ್ಲಿ 2 ಮನೆಗಳು ಬಾಡಿಗೆಗೆ ಇವೆ. ವಿಚಾರಿಸಿ
9901247050, 7204022829

**ಕೆಲಸಕ್ಕೆ ಮಹಿಳೆಯರು ಬೇಕಾಗಿದ್ದಾರೆ**
ಸಾಯಿ ಶ್ರೀ ಇಂಡಸ್ಟ್ರೀಸ್
ಸಬ್‌ರಿಜಿಸ್ಟರ್ ಆಫೀಸ್ ಹತ್ತಿರ, MRF ಟೈರ್ ಶೊ ರೂಂ ಹಿಂಭಾಗ, ದಾವಣಗೆರೆ.
90368 31855

**ಬೇಕಾಗಿದ್ದಾರೆ**
ಕ್ಲಿನಿಕ್‌ನಲ್ಲಿ ರಿಸೆಪ್ಷನಿಸ್ಟ್ (ಬೇಸಿಕ್ ಕಂಪ್ಯೂಟರ್ ಜ್ಞಾನ ಇರಲಿ) ಕೆಲಸ ಮಾಡಲು ಮಹಿಳಾ ಅಭ್ಯರ್ಥಿ ಬೇಕಾಗಿದ್ದಾರೆ. ಬೆಳಿಗ್ಗೆ 11ರಿಂದ ಸಂಜೆ 8ರ ಒಳಗೆ ಫೋನ್ ಮಾಡಿ ಸಂಪರ್ಕಿಸಿ:
91640 54547

**ಬೇಕಾಗಿದ್ದಾರೆ**
ಬೆಂಗಳೂರಿನಲ್ಲಿ ಸೆಕ್ಯೂರಿಟಿ/ಕ್ಲಿನಿಂಗ್ ಕೆಲಸ. ವಯಸ್ಸು 20 ರಿಂದ 30 ವರ್ಷ, ಸಂಬಳ : ರೂ. 12,000/-, ವಸತಿ ವ್ಯವಸ್ಥೆ ಇರುತ್ತದೆ. ಸಂಪರ್ಕಿಸಿ :
97400 98047

**1946 ಕೆಲಸಕ್ಕೆ ಬೇಕಾಗಿದ್ದಾರೆ**
ಟೀ ಹಾಗೂ ಕಾಫಿ ಮಾಡುವವರು ಹಾಗೂ ಜವಾಬ್ದಾರಿ ಕೆಲಸಗಾರರು ಬೇಕಾಗಿದ್ದಾರೆ. ಸ್ಥಳ : 1946 ಪ್ರಕಾಶ್ ಕಾಫಿ ವರ್ಕ್ಸ್ ದಾವಣಗೆರೆ.
99004 38052, 97401 53513

**ಕೆಲಸಕ್ಕೆ ಬೇಕಾಗಿದ್ದಾರೆ**
ಮಾರ್ಕೆಟಿಂಗ್ ಕೆಲಸಕ್ಕೆ ಯುವಕ - ಯುವತಿಯರು ಬೇಕಾಗಿದ್ದಾರೆ. ಸಂಪರ್ಕಿಸಿ :
73385 80345

**ಹೋಟೆಲ್ ಬಾಡಿಗೆಗಿದೆ**
ಶಾಮನೂರು ರಸ್ತೆಯ ಬಾರ್‌ನಲ್ಲಿ ನಾನ್‌ವೆಜ್ ಹೋಟೆಲ್ ನಡೆಸಲು ಬೇಕಾಗಿದ್ದಾರೆ. ಸಂಪರ್ಕಿಸಿ :
98441 27137

**KHB ಸೈಟ್ ಮಾರಾಟಕ್ಕೆ**
ದಾವಣಗೆರೆಯಿಂದ ಮೊದಲ ಭಾಗದ ಟ್ಯಾಂಕ್ ಹತ್ತಿರ 30x40 ಸೌತ್ (33 ಲಕ್ಷ) 30x40 ಸೌತ್ (32.5 ಲಕ್ಷ)
ಕಿರಣ್ ಬೂಸ್ನೂರ್
94824 63409
(ನೇರವಾಗಿ ಹಳೆ ರಿಜಿಸ್ಟರ್ ಪಾರ್ಟಿ )

**KHB ಬಂಗ್ಲೆ ಸೈಟ್ ಮಾರಾಟಕ್ಕೆ**
ಕಮರ್ಷಿಯಲ್ ಆಗುವಂತಹ, 100 ಅಡಿ ರಸ್ತೆಗೆ 80X60 ಸೌತ್, 40x60 ಉತ್ತರ, 40x60 ಉತ್ತರ, 50x80 ಉತ್ತರ, 40x60 ಉತ್ತರ, 50x80 ಸರ್ಕಲ್ ಪಕ್ಕ, (GOOD LOCATION)
ಕಿರಣ್ ಬೂಸ್ನೂರ್ (ಏಜೆಂಟ್)
ಮೊ: 94824 63409
98440 63409, 97315 63409

**ಮನೆ ಬಾಡಿಗೆಗೆ / ಲೀಜ್‌ಗೆ ಇವೆ**
ಆಂಜನೇಯ ಬಡಾವಣೆಯಲ್ಲಿ ಮೊದಲನೇ ಮಹಡಿ ದಕ್ಷಿಣಕ್ಕೆ 2 ಬೆಡ್ ರೂಂ (ಸಸ್ಯಹಾರಿಗಳಿಗೆ ಮಾತ್ರ) ವಿನಾಯಕ ಬಡಾವಣೆಯಲ್ಲಿ, ಶಿವಕುಮಾರ ಸ್ವಾಮಿ ಬಡಾವಣೆಯಲ್ಲಿ 3 ಬೆಡ್ ರೂಂ ಮನೆಗಳು.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ಸೈಟುಗಳು ಮಾರಾಟಕ್ಕಿವೆ**
ನೂತನ ಕಾಲೇಜು ಹಿಂಭಾಗ LIC ಕಾಲೋನಿಯಲ್ಲಿ 30x46 ಪೂರ್ವ, ವಿನಾಯಕ ಬಡಾವಣೆಯಲ್ಲಿ 30x50 ದಕ್ಷಿಣ ಅಕ್ಕ-ಪಕ್ಕ. ಆಂಜನೇಯ ಬಡಾವಣೆಯಲ್ಲಿ 30x50 ಉತ್ತರ, 30x47 ದಕ್ಷಿಣ.
ಸ್ವಾಮಿ ಏಜೆಂಟ್, ವಿದ್ಯಾನಗರ
97421 44715

**ವಾಟರ್ ಲೀಕೇಜ್ (ವಾಟರ್ ಪ್ರೂಫಿಂಗ್)**
ನಿಮ್ಮ ಮನೆ ಮತ್ತಿತರೆ ಕಟ್ಟಡಗಳ ಬಾತ್‌ರೂಂ, ಬಾಲ್ಕನಿ, ಟೆರೇಸ್, ನೀರಿನ ತೊಟ್ಟಿ, ಗೋಡೆ ಬಿರುಕು, ನೀರಿನ ಟ್ಯಾಂಕ್, ಎಲ್ಲಾ ರೀತಿಯ ನೀರಿನ ಲೀಕೇಜ್‌ಗಳಿಗೆ ಸಂಪರ್ಕಿಸಿ:
95387 77582
ಕೆಲಸ 100% ಗ್ಯಾರಂಟಿ.

**ಟ್ಯಾಂಕ್ ಕ್ಲೀನಿಂಗ್**
ಮನೆಯ ನೀರಿನ ತೊಟ್ಟಿ, ಟ್ಯಾಂಕ್‌ಗಳು ಗಲೀಜಾಗಿದ್ದರೆ ಯಂತ್ರಗಳನ್ನು ಬಳಸಿ ನಾವು ಕ್ಲೀನ್ ಮಾಡುತ್ತೇವೆ.
ಅತ್ಯುತ್ತಮ ಸೇವೆಗೆ ಸಂಪರ್ಕಿಸಿ
99863 61250
80739 48857

**FLAT FOR LEASE**
3 BHK, Sqft :1888
AM Apartment
Nainika Prime Rose
Vidyanagar last city bus stop Davanagere.
89519 38228, 80502 22181

**ಬೇಕಾಗಿದ್ದಾರೆ**
ಮಹಿಳಾ ಟೆಲಿಕಾಲರ್ಸ್
30ವರ್ಷದ ಒಳಗಿನ ವಯೋಮಿತಿ, SSLC/PUC/DEGREE, ತಿಂಗಳಿಗೆ ಸಂಬಳ : 15,000ರೂ.ವರೆಗೆ ಸಂಪರ್ಕಿಸಿ :
80504 42755

**ಶ್ರೀ ಸಾಯಿ ಫೈನಾನ್ಸ್ (ರಿ)**
ಹೋಟೆಲ್, ಬಟ್ಟೆ ಅಂಗಡಿ, ರೆಸ್ಟೋರೆಂಟ್, ಪ್ರಾವಿಜನ್ ಸ್ಟೋರ್ ಫ್ಯಾನ್ಸಿ ಸ್ಟೋರ್, ಬೇಕರಿ ಟೀಸ್ಟಾಲ್ ಫಾಸ್ಟ್ ಫುಡ್ ಹೋಟೆಲ್, ಗ್ಯಾರೇಜ್ ಮೊಬೈಲ್ ಶಾಪ್, ಎಲೆಕ್ಟ್ರಿಕಲ್ ಶಾಪ್ ಚಿಪ್ಸ್ ಶಾಪ್ ಇತ್ಯಾದಿ ಶಾಪ್‌ಗಳಿಗೆ ಫೈನಾನ್ಸ್ ನೀಡಲಾಗುವುದು.
96860 22969

**ಅಧಿಕೃತ ಚೀಟಿ ಸಂಸ್ಥೆ**
ರೂ. 5 ಲಕ್ಷ ಚೀಟಿ ಪ್ರಾರಂಭ 50 ಸದಸ್ಯರು 6,500/- ರಿಂದ 10,000 /- ರೂ ವರೆಗೆ,
ಸ್ಕಂದ ಚಿಟ್ ಫಂಡ್ಸ್- (ರಿ)
ದಾವಣಗೆರೆ.
78997 75159

**ಬೇಕಾಗಿದ್ದಾರೆ**
ಪಾಲಿ ಕ್ಲಿನಿಕ್‌ಗೆ ಮಾರ್ಕೆಟಿಂಗ್ ಮಾಡಲು ಹುಡುಗರು ಬೇಕಾಗಿದ್ದಾರೆ. ಸ್ವಂತ ಬೈಕ್ ಹೊಂದಿದ್ದವರಿಗೆ ಆದ್ಯತೆ.
98455 84489

**TUITIONS**
CBSE / ICSE Boards
Class 8th, 9th, 10th
CRASH COURSES FOR
NEET / CET / IIT - JEE
PUC I / PUC II / PCMB
NEET Long Term / Supplementary Exams
97398 65711, 94822 44114

**AdBlue / DEF**
available with Best Quality & Price for All BS6 Diesel
Commercial & Passanger Vehicles
Visit: Best Lubricants
Opp. to New Pvt Bus Stand PB Road, Davangere.
73380 33337

**ಓದುಗರ ಗಮನಕ್ಕೆ**
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ – ವಸ್ತು ಲೋಪ, ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
–ಜಾಹೀರಾತು ವ್ಯವಸ್ಥಾಪಕರು

**ಕೆಲಸಕ್ಕೆ ಬೇಕಾಗಿದ್ದಾರೆ**
ಎಸ್.ಆರ್. ಕನ್‌ಸ್ಟ್ರಕ್ಷನ್ಸ್
ಯಾವುದೇ ಡಿಗ್ರಿ ಆಗಿರುವ ಕನ್ನಡ, ಹಿಂದಿ, ಇಂಗ್ಲಿಷ್ ಮಾತನಾಡಲು & ಕಂಪ್ಯೂಟರ್ ಜ್ಞಾನವಿರುವವರು ಕೆಲಸಕ್ಕೆ ಬೇಕಾಗಿದ್ದಾರೆ.
ಸಮಯ : ಬೆ. 10.00 ರಿಂದ ಸಂ. 6.00
ಸಿದ್ದವೀರಪ್ಪ ಬಡಾವಣೆ, ದಾವಣಗೆರೆ.
76769 99539

**ಬೇಕಾಗಿದ್ದಾರೆ**
ಸೆಕ್ಯೂರಿಟಿ ಆಫೀಸ್‌ಗೆ ಮಹಿಳೆಯರು ಸೆಕ್ಯೂರಿಟಿ ಫೀಲ್ಡ್ ವರ್ಕ್‌ಗೆ ಪುರುಷರು ಮತ್ತು ಮಹಿಳೆಯರು, ಸೆಕ್ಯೂರಿಟಿ ಕೆಲಸಕ್ಕೆ ಮಹಿಳೆಯರು ಮತ್ತು ಪುರುಷರು ಬೇಕಾಗಿದ್ದಾರೆ. ಹರಿಹರ to ದಾವಣಗೆರೆ.
63661 61287

**ಮನೆ ಕ್ಲೀನಿಂಗ್ ಮಾಡಿಕೊಡಲಾಗುವುದು**
ಮನೆ ಕ್ಲೀನಿಂಗ್ ಮತ್ತು ಹಳೆಮನೆ ಬಾಡಿಗೆ ಕೊಡುವ ಮನೆಗಳನ್ನು ಕ್ಲೀನಿಂಗ್ ಮಾಡಿಕೊಡಲಾಗುವುದು. ಹಾಗೂ ಬಾತ್ ರೂಂ ಆಸಿಡ್ ವಾಶ್ ಮಾಡಿಕೊಡಲಾಗುವುದು.
99863 61250, 80730 24690

**ಲಿಂಗಾಯತ ವಧು-ವರ**
ವೀರಶೈವ ಲಿಂಗಾಯತ ಡಾಕ್ಟರ್ಸ್ MBBS, MD, MS, BDS, MDS, ಇಂಜಿನಿಯರ್ಸ್ (ಸ್ವದೇಶ ಮತ್ತು ವಿದೇಶ), ಸರ್ಕಾರಿ ನೌಕರಿಯಲ್ಲಿರುವ ವಧು-ವರರಿಗಾಗಿ ಹಾಗೂ ವಿಧವೆ, ವಿಧುರ, ವಿಚ್ಛೇದಿತರ ಹೊಸ ಜೀವನಕ್ಕಾಗಿ ಸಂಪರ್ಕಿಸಿರಿ.
98807 29108

**ಮಾರಾಟಕ್ಕಿದೆ**
ಸಿಮೆಂಟ್ ಇಟ್ಟಿಗೆ ಮಿಷನ್ ಮಾರಾಟಕ್ಕಿದೆ.
94489 24273

**ಡ್ರೈವರ್ ಬೇಕಾಗಿದ್ದಾರೆ**
ಆನಗೋಡು ಸಮೀಪ NH-48 ನಲ್ಲಿ ಇರುವ BPCL ಪೆಟ್ರೋಲ್ ಬಂಕ್‌ನ 20KL ಟ್ಯಾಂಕರ್ ಲಾರಿಗೆ HAZARD ಇರುವ ಟ್ಯಾಂಕರ್ ಲಾರಿ ಚಾಲಕರು ಬೇಕಾಗಿದ್ದಾರೆ. ಸೂಕ್ತ ದಾಖಲೆಗಳೊಂದಿಗೆ ಸಂಪರ್ಕಿಸಿ :
90082 28222, 99001 42052

**ಬೇಕಾಗಿದ್ದಾರೆ**
ಹೋಟೆಲ್ ಬಂಡೆ
ಫಾಸ್ಟ್ ಫುಡ್‌ನಲ್ಲಿ ಟಿಫನ್ ಭಟ್ರು ಬೇಕಾಗಿದ್ದಾರೆ.
95130 33363

**JOB OFFER**
Computer Trainer
Software Skills Computer Basics, Taly & DTP
(Qualification-B.com)
Vertex Education Institute
97385 32254

**WANTED**
ROYAL INSURANCE BROKING (INDIA) PVT Ltd.
Telecaller's & Sales Executive, Marketing Executives
Age : 18 to 27 Salary+Incentive
Quali:Degree, Work place-Davanagere
Walk in Interview -Time:10.30 am-4 pm
99864 47909

**COMMERCIAL SITE FOR SALE**
West facing 40x32, Commercial Site for sale
Jayanagar, 40 feet Road, Davangere.
9342224449, 9738827452

**ಮದ್ಯಪಾನ ಬಿಡಬೇಕೇ ?**
ಉಬ್ಬಸ ರೋಗ, ಕಾಲು ನೋವು, ಅಲರ್ಜಿ, ಮಧುಮೇಹ, ವೈಟ್‌ಗೈನ್ ಮತ್ತು ವೈಟ್ ಲಾಸ್, ಗ್ಯಾಸ್ಟ್ರಿಕ್ ಇತ್ಯಾದಿಗಳಿಗೆ ನಮ್ಮನ್ನು ಸಂಪರ್ಕಿಸಿ. ಪ್ರತಿ ತಿಂಗಳು 12 ಮತ್ತು 13 ರಂದು ವಿಳಾಸ : ಶ್ರೀ ಲಾಡ್ಜ್, ಪಂಜಾಬ್ ನ್ಯಾಷನಲ್ ಬ್ಯಾಂಕ್ ಹತ್ತಿರ, ಪಿ.ಬಿ.ರಸ್ತೆ, ದಾವಣಗೆರೆ.
ಡಾ।। ಶರ್ಮ
ಸಮಯ: ಬೆ. 10 ರಿಂದ ಮಧ್ಯಾಹ್ನ 3
ಮೊ. 98869 40831

**ಹೋಮ್ ನರ್ಸಿಂಗ್ ಸರ್ವೀಸ್**
ವಯೋವೃದ್ಧರು ಬೆಡ್ ರಿಡನ್ ಪೇಷೆಂಟ್‌ಗಳಿಗೆ ಬೆಳಿಗ್ಗೆ ಮತ್ತು ಸಂಜೆ ಬಂದು ಡೈಪರ್ ಚೇಂಜ್ ಮಾಡುವುದು. ಸ್ಪಾಂಜ್ ಬಾತ್ (ಸ್ನಾನ) ಆಯಿಲ್ ಮಸಾಜ್ ಮಾಡಲಾಗುತ್ತದೆ.
85508 36642

**SPOKEN ENGLISH**
Java, Tally
(Door to Door also)
JOB ASSISTANCE
97426 10385
84316 00348

# ಎಸ್ಸಿ ಪಟ್ಟಿಯಿಂದ ಎಕೆ, ಎಡಿ ಹೆಸರು ತೆಗೆದು ಮೂಲ ಜಾತಿ ಹೆಸರಲ್ಲಿ ಪ್ರಮಾಣ ಪತ್ರ ನೀಡಿ

## ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡುವಂತೆ ರಾಜ್ಯ ಸರ್ಕಾರಕ್ಕೆ ಮಾಜಿ ಸಚಿವ ಹೆಚ್. ಆಂಜನೇಯ ಒತ್ತಾಯ

ಚಿತ್ರದುರ್ಗ, ಫೆ. 10- ಎಸ್ಸಿ ಪಟ್ಟಿಯಿಂದ ಎಕೆ, ಎಡಿ ಹೆಸರು ತೆಗೆದು ಮೂಲ ಜಾತಿ ಹೆಸರಲ್ಲಿ ಪ್ರಮಾಣ ಪತ್ರ ನೀಡಲು ಕೇಂದ್ರ ಸರ್ಕಾರಕ್ಕೆ ರಾಜ್ಯ ಸರ್ಕಾರ ಕೂಡಲೇ ಶಿಫಾರಸ್ಸು ಮಾಡುವಂತೆ ಮಾಜಿ ಸಚಿವ ಎಚ್.ಆಂಜನೇಯ ಒತ್ತಾಯಿಸಿದ್ದಾರೆ.

ನಗರದ ಪ್ರವಾಸಿ ಮಂದಿರದಲ್ಲಿ ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳಿವೆ. ಇವುಗಳಲ್ಲಿ ಆದಿಕರ್ನಾಟಕ, ಆದಿದ್ರಾವಿಡ, ಆದಿಆಂಧ್ರ ಎಂಬ ಒಂದೇ ಹೆಸರಿನಲ್ಲಿ ಜಾತಿ ಸೂಚಕ ಪ್ರಮಾಣ ಪತ್ರವನ್ನು ಮಾದಿಗರು, ಛಲವಾದಿಗರು ಪಡೆಯುತ್ತಿದ್ದಾರೆ. ಇದು ಬಹಳಷ್ಟು ಗೊಂದಲ ಉಂಟು ಮಾಡುತ್ತಿದೆ. ಇದಕ್ಕೆ ಶಾಶ್ವತ ಪರಿಹಾರವೆಂದರೇ ಪರಿಶಿಷ್ಟ ಜಾತಿ ಪಟ್ಟಿಯಿಂದ ಆದಿಕರ್ನಾಟಕ, ಆದಿದ್ರಾವಿಡ, ಆದಿಆಂಧ್ರ ಹೆಸರುಗಳನ್ನು ತೆಗೆದುಹಾಕಬೇಕು. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ಕೂಡಲೇ ಕೇಂದ್ರ ಸರ್ಕಾರಕ್ಕೆ ಶಿಫಾರಸ್ಸು ಮಾಡಬೇಕು ಎಂದು ಒತ್ತಾಯಿಸಿದರು.

ಒಳಮೀಸಲಾತಿ ನೀಡುವಂತೆ 30 ವರ್ಷಗಳ ಕಾಲದಿಂದಲೂ ಮಾದಿಗ ಸಮುದಾಯ ಹಾಗೂ ವಿವಿಧ ಸಂಘಟನೆಗಳು ಹೋರಾಟ ನಡೆಸಿವೆ. ಇದರ ಫಲವಾಗಿ ಎಂಪೋರಿಯರ್ ಡೇಟಾ ಸಂಗ್ರಹಿಸಿ ಗುಂಪುಗಳನ್ನು ವರ್ಗೀಕರಿಸಿ ಒಳಮೀಸಲಾತಿ ಜಾರಿಗೊಳಿಸಲು ರಾಜ್ಯ ಸರ್ಕಾರಗಳಿಗೆ ಅಧಿಕಾರ ಇದೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಇದು ಮಾದಿಗರಿಗೆ ಹಾಗೂ ಸಂಬಂಧಿತ ಜಾತಿಯವರಿಗೆ ವರವಾಗಿದೆ ಎಂದರು.

ಒಳಮೀಸಲಾತಿ ಜಾರಿಗೆ ತಕ್ಷಣ ಸ್ಪಂದಿಸಿರುವ ಸಾಮಾಜಿಕ ನ್ಯಾಯದ ಹರಿಕಾರ, ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು, ಮೀಸಲು ಹಂಚಿಕೆಗೆ ಯಾವ ರೀತಿ ಕ್ರಮಕೈಗೊಳ್ಳಬೇಕೆಂಬ ಕುರಿತು ವರದಿ ನೀಡುವಂತೆ ನ್ಯಾ.ನಾಗಮೋಹನ್ ದಾಸ್ ನೇತೃತ್ವದಲ್ಲಿ ಏಕ ಸದಸ್ಯ ವಿಚಾರಣಾ ಆಯೋಗ ರಚಿಸಿ ನಿಗದಿತ ಸಮಯದಲ್ಲಿ ವರದಿ ಸಲ್ಲಿಸುವಂತೆ ಗಡುವು ನೀಡಿದೆ. ಪರಿಶಿಷ್ಟ ಜಾತಿಯಲ್ಲಿ 101 ಜಾತಿಗಳಿದ್ದು, ಇದರಲ್ಲಿ 1 ಸಾವಿರದಿಂದ 1 ಲಕ್ಷದ ಜನಸಂಖ್ಯೆಯೊಳಗೆ ಇರುವ ಸಣ್ಣ ಪ್ರಮಾಣದ 80 ಜಾತಿಗಳು ಇವೆ. ಉಳಿದಂತೆ ಬಹುಸಂಖ್ಯಾತ ಮಾದಿಗ, ಛಲವಾದಿ, ಲಂಬಾಣಿ, ಭೋವಿ, ಬಳಿಕ ಸ್ಥಾನದಲ್ಲಿ ಕೊರಚ, ಕೊರಮರು ಇದ್ದಾರೆ ಎಂದರು.



ಮಾದಿಗ ಸಂಬಂಧಿತ 16 ಜಾತಿಗಳಿವೆ. ಚಮ್ಮಾರ, ಸಮಗಾರ, ಮೋಚಿ, ಡೋರ್, ದಕ್ಕಲಿಗ ಮತ್ತಿತರೆ ಜಾತಿಗಳು ಎಡಗುಂಪಿಗೆ ಸೇರಿವೆ. ಈ ಜಾತಿಗಳು ಜಾತಿ ಸೂಚಕ ಪ್ರಮಾಣಪತ್ರ ಪಡೆಯುವಾಗ ಮೂಲ ಜಾತಿ ಹೆಸರಲ್ಲಿ ಪಡೆಯದೇ ಆದಿಕರ್ನಾಟಕ ಎಂದು ಗುರುತಿಸಿಕೊಂಡಿವೆ. ರಾಜ್ಯದ ಅರ್ಧಭಾಗದಷ್ಟು ಜಿಲ್ಲೆಗಳಲ್ಲಿ ಮಾದಿಗ ಮತ್ತು ಛಲವಾದಿ ಈ ಎರಡು ಸಮುದಾಯದವರು ಬಹುತೇಕ ಆದಿಕರ್ನಾಟಕ (ಎಕೆ), ಕೆಲವೆಡೆ ಆದಿದ್ರಾವಿಡ (ಎಡಿ) ಎಂದು ಗುರುತಿಸಿಕೊಂಡಿದ್ದಾರೆ ಎಂದರು.

ಮೈಸೂರು, ಚಾಮರಾಜನಗರ, ಮಂಡ್ಯ, ರಾಮನಗರ, ಬೆಂಗಳೂರು, ನಗರ, ಗ್ರಾಮಾಂತರ, ಕೋಲಾರ, ಚಿಕ್ಕಬಳ್ಳಾಪುರ, ಹಾಸನ ಜಿಲ್ಲೆಗಳಲ್ಲಿ ಮಾದಿಗರು ಮತ್ತು ಛಲವಾದಿಗರು ಆದಿಕರ್ನಾಟಕ ಎಂಬ ಒಂದೇ ಹೆಸರಿನಲ್ಲಿ ಜಾತಿ ಸೂಚಕ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ. ತುಮಕೂರು, ಚಿತ್ರದುರ್ಗ, ದಾವಣಗೆರೆ, ಶಿವಮೊಗ್ಗ, ಬಳ್ಳಾರಿ, ವಿಜಯನಗರ ಜಿಲ್ಲೆಗಳಲ್ಲಿ ಮಾದಿಗರು ಆದಿಕರ್ನಾಟಕವೆಂದು ಮತ್ತು ಛಲವಾದಿಗಳು ಆದಿದ್ರಾವಿಡ ಎಂದು ಜಾತಿ ಸೂಚಕ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ. ಇದು ಎರಡು ಜಾತಿಗಳಲ್ಲಿ ಯಾವ್ಯಾವ ಜಾತಿಗಳು ಎಷ್ಟು ಸಂಖ್ಯೆಯಲ್ಲಿ ಇವೆ ಎಂದು ನಿಖರವಾಗಿ ಹೇಳಲು ಕಷ್ಟ ಸಾಧ್ಯವಾಗಿದೆ. ಉಳಿದಂತೆ ಕಲ್ಯಾಣ ಕರ್ನಾಟಕ, ಉತ್ತರ ಕರ್ನಾಟಕ ಭಾಗಗಳಲ್ಲಿ ಮಾದಿಗರೆಂದು, ಹೊಲೆಯರೆಂದು ಮತ್ತು ಛಲವಾದಿಗರೆಂದು ಜಾತಿ ಸೂಚಕ ಪ್ರಮಾಣ ಪತ್ರ ಪಡೆಯುತ್ತಿದ್ದಾರೆ. ಇಲ್ಲಿ ಯಾವ ಗೊಂದಲವು ಇಲ್ಲ ಎಂದರು.

ಇದಕ್ಕೆಲ್ಲ ಪರಿಹಾರವೆಂಬಂತೆ ನ್ಯಾ.ಸದಾಶಿವ ಆಯೋಗ ಮನೆ ಮನೆ ಸಮೀಕ್ಷೆ ನಡೆಸಿ ಯಾವ ಯಾವ ಜಾತಿಯವರು ಎಷ್ಟು ಸಂಖ್ಯೆಯಲ್ಲಿದ್ದಾರೆ ಮತ್ತು ಹಿಂದುಳಿವಿಕೆಯನ್ನು ದಾಖಲಿಸಿ, ಒಳಮೀಸಲಾತಿ ವರ್ಗೀಕರಣಕ್ಕೆ ವರದಿ ಸಿದ್ಧಪಡಿಸಿದೆ. ಈ ವರದಿಯನ್ನೇ ಆಧಾರವಾಗಿಟ್ಟುಕೊಂಡು ಎಂಪೋರಿಯರ್ ಡೇಟಾ ಪಡೆದು ಒಳಮೀಸಲಾತಿ ವರ್ಗೀಕರಣಕ್ಕೆ ನ್ಯಾ. ನಾಗಮೋಹನ್ ದಾಸ್ ಮುಂದಾಗಬೇಕೆಂಬುದು ನಮ್ಮ ಆಗ್ರಹ. ಈ ನಿಟ್ಟಿನಲ್ಲಿ ರಾಜ್ಯ ಸರ್ಕಾರ ವರದಿ ಪರಿಶೀಲನೆಗೆ ಆಯೋಗಕ್ಕೆ ಅವಕಾಶ ಕಲ್ಪಿಸಬೇಕು ಎಂದರು.

ನ್ಯಾ.ನಾಗಮೋಹನ್ ದಾಸ್ ಅವರು ದಲಿತ ಸಮುದಾಯದ ಪ್ರಗತಿಗೆ ಬದ್ಧರಾಗಿದ್ದು, ಅವರು ನಿಗದಿತ ಅವಧಿಯೊಳಗೆ ರಾಜ್ಯ ಸರ್ಕಾರಕ್ಕೆ ವರದಿ ನೀಡಲು ಮುಂದಾಗಬೇಕು. ನ್ಯಾ.ನಾಗಮೋಹನ್ ದಾಸ್ ವಿಚಾರಣಾ ಆಯೋಗವು, ರಾಜ್ಯ ಸರ್ಕಾರದಲ್ಲಿ ಕೆಲಸ ಮಾಡುತ್ತಿರುವ ಜವಾನ ಹುದ್ದೆಯಿಂದ ಐಎಎಸ್, ಐಪಿಎಸ್, ಐಎಫ್‌ಎಸ್, ಕೆಎಎಸ್ ಸೇರಿ ಉನ್ನತ ಹುದ್ದೆಯವರೆಗೆ ಇರುವ ನೌಕರರ ಸಂಖ್ಯೆ ಎಷ್ಟು. ಈ ನೌಕರರಿಂದ ಮೂಲ ಜಾತಿಯನ್ನು ಸಂಗ್ರಹಿಸಿ ಒಟ್ಟಾರೆ ಎಲ್ಲ ಇಲಾಖೆಗಳಲ್ಲಿ ಸರ್ಕಾರಿ ನೌಕರಿಯಲ್ಲಿ ಯಾವ ಜಾತಿ ಯಾವ ಪ್ರಮಾಣದಲ್ಲಿದ್ದಾರೆಂಬ ಮಾಹಿತಿಯನ್ನು ನಿಖರವಾಗಿ ಸಂಗ್ರಹಿಸಬೇಕು. ಈ ಅಂಶದ ಆಧಾರದ ಮೇಲೆ ಮೀಸಲಾತಿ ಆಧಾರದಡಿ ಸರ್ಕಾರಿ ನೌಕರಿ ಪಡೆಯುವಲ್ಲಿ ಯಾವ ಜಾತಿಗಳಿಗೆ ಅನ್ಯಾಯವಾಗಿದೆ ಎಂಬುದನ್ನು ಒಳಮೀಸಲಾತಿ ನೀಡುವ ಸಂದರ್ಭ ಪರಿಗಣಿಸಬೇಕು ಎಂದು ಒತ್ತಾಯಿಸಿದರು.

ಎಸ್‌ಸಿಎಸ್‌ಪಿ, ಟಿಎಸ್‌ಪಿ ಅನುದಾನದ ಹಂಚಿಕೆ ಹಾಗೂ ಎಲ್ಲ ಯೋಜನೆಗಳಲ್ಲೂ ಒಳಮೀಸಲಾತಿ ಕಲ್ಪಿಸಬೇಕು. ವೈದ್ಯಕೀಯ, ದಂತ ವೈದ್ಯಕೀಯ, ಇಂಜಿನಿಯರಿಂಗ್, ಡಿಪ್ಲೋಮಾ, ನರ್ಸಿಂಗ್, ಐಟಿಐ, ಪ್ಯಾರಾ ಮೆಡಿಕಲ್, ಪ್ರಥಮ ದರ್ಜೆ, ಪಿಯು ಕಾಲೇಜು, ಪ್ರೌಢಶಾಲೆ ಹೀಗೆ ಶಿಕ್ಷಣ ಸಂಸ್ಥೆಗಳನ್ನು ನಡೆಸುತ್ತಿರುವವರು ಸರ್ಕಾರಿ ಅನುದಾನ ಮತ್ತು ನಿವೇಶನ ಪಡೆದಿದ್ದಾರೆ. ಪರಿಶಿಷ್ಟ ಗುಂಪಿನಲ್ಲಿರುವವರು ಯಾವ ಯಾವ ಜಾತಿಯವರು ಶಿಕ್ಷಣ ಸಂಸ್ಥೆ ನಡೆಸುತ್ತಿದ್ದಾರೆಂಬ ಮಾಹಿತಿಯನ್ನು ಸಂಗ್ರಹಿಸಬೇಕು. ಹೀಗೆ ಎಲ್ಲ ಕ್ಷೇತ್ರಗಳಲ್ಲಿ ಮಾಹಿತಿ ಸಂಗ್ರಹಿಸಿದರೆ ಯಾವ ಜಾತಿ ಸರ್ಕಾರಿ ಸೌಲಭ್ಯಗಳನ್ನು ಪಡೆಯುವಲ್ಲಿ ಹೆಚ್ಚು ಹಿಂದುಳಿದಿದೆ ಎಂಬುದು ಸ್ಪಷ್ಟಗೊಳ್ಳಲಿದೆ. ಆಗ ಒಳಮೀಸಲಾತಿ ವರ್ಗೀಕರಣ ವೇಳೆ ಮೀಸಲು ಹಂಚಿಕೆಗೆ ಸಹಕಾರಿಯಾಗಲಿದೆ ಎಂದರು.

ಪತ್ರಿಕಾಗೋಷ್ಠಿಯಲ್ಲಿ ಲಿಡ್ಕರ್ ಮಾಜಿ ಅಧ್ಯಕ್ಷ ಓ.ಶಂಕರ್, ಜಿಪಂ ಮಾಜಿ ಸದಸ್ಯರಾದ ಆರ್.ಕೃಷ್ಣಮೂರ್ತಿ, ಆರ್. ನರಸಿಂಹರಾಜು, ವಕೀಲರಾದ ಶರಣಪ್ಪ, ರವೀಂದ್ರ ಇದ್ದರು.

### 13ರಂದು ಮಾದಿಗ ಮತ್ತು ಸಂಬಂಧಿತ ಜಾತಿಗಳ ಸಮನ್ವಯ ಸಭೆ

ಮಾದಿಗ ಮತ್ತು ಸಂಬಂಧಿತ ಜಾತಿಗಳ ಸಮನ್ವಯ ಸಭೆಯನ್ನು ಫೆ.13 ಗುರುವಾರ ಮಧ್ಯಾಹ್ನ 3 ಗಂಟೆಗೆ ಬೆಂಗಳೂರಿನ ಅಂಬೇಡ್ಕರ್ ಭವನದಲ್ಲಿ ಸಭೆ ಕರೆಯಲಾಗಿದೆ.

ಸಮಗಾರ, ಚಮ್ಮಾರ, ಮೋಚಿ, ಡೋರ್, ದಕ್ಕಲಿಗ ಮತ್ತಿತರೆ ಜಾತಿಗಳು ಮಾದಿಗ ಸಂಬಂಧಿತ ಎಡಗುಂಪಿನ ಜಾತಿಗಳಾಗಿವೆ. ಈ ಜಾತಿಗಳಲ್ಲಿ ಸಾಮರಸ್ಯ ಮೂಡಿಸಿ, ಒಗ್ಗಟ್ಟಾಗಿ ನಮ್ಮ ಸಮಸ್ಯೆಗಳ ಪರಿಹಾರ ಹಾಗೂ ಒಳಮೀಸಲಾತಿ ಪಡೆಯುವ ಹಕ್ಕೊತ್ತಾಯವನ್ನು ಮಂಡಿಸಲು ಸಭೆ ಕರೆಯಲಾಗಿದೆ.

ಅಂದಿನ ಸಭೆಗೆ ನ್ಯಾ. ಎಚ್.ಎನ್.ನಾಗಮೋಹನ್ ದಾಸ್ ಅವರು ಖುದ್ದಾಗಿ ಆಗಮಿಸಿ, ಎಲ್ಲರ ಸಮಸ್ಯೆಗಳನ್ನು ಆಲಿಸಿ, ಮನವಿ ಸ್ವೀಕರಿಸಲಿದ್ದಾರೆ. ಈ ಸಭೆಗೆ ಮಾದಿಗ ಮತ್ತು ಸಂಬಂಧಿತ ಜಾತಿಯವರು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಳ್ಳಬೇಕು ಎಂದು ಎಚ್.ಆಂಜನೇಯ ತಿಳಿಸಿದ್ದಾರೆ.

## ಹೊಸ 2025ರ ಮಾದರಿಯ ಸುಜುಕಿ ಅಕ್ಸೆಸ್ 125 ಬಿಡುಗಡೆ



ದಾವಣಗೆರೆ, ಫೆ.10- ನಗರದ ಲಕ್ಷ್ಮಿ ಸುಜುಕಿ ಅವರ ಶೋ ರೂಮ್‌ನಲ್ಲಿ ಸುಜುಕಿ ಕಂಪನಿಯ 2025ರ ಹೊಸ ಮಾದರಿಯ ಸುಜುಕಿ ಅಕ್ಸೆಸ್ 125 ವಾಹನವನ್ನು ಲಕ್ಷ್ಮಿ ಸುಜುಕಿ ಶೋರೂಮ್ ಮಾಲೀಕ ಮಂಜುನಾಥ್ ಅನಾವರಣಗೊಳಿಸಿದರು.

ವಾಹನದ ಕ್ಷಮತೆಯ ಬಗ್ಗೆ ಮಾತನಾಡಿದ ಮಂಜುನಾಥ್, ಉತ್ತಮ ಮೈಲೇಜ್, ಅಧಿಕ ಪಿಕ್ ಅಪ್ ಹಾಗೂ ನೂತನ ಫೀಚರ್ಸ್‌ಗಳನ್ನು ಹೊಂದಿರುವ ವಾಹನವನ್ನು ಜನತೆಗೆ ಪರಿಚಯಿಸುತ್ತಿರುವ ಬಗ್ಗೆ ಸಂತಸ ವ್ಯಕ್ತಪಡಿಸಿದರು. ವಾಹನದ ಉಚಿತ ಟೆಸ್ಟ್ ಡ್ರೈವ್ ಇನ್ನಿತರ ಮಾಹಿತಿಗಾಗಿ ಸಾಯಿ ಇಂಟರ್‌ನ್ಯಾಷನಲ್ ಹತ್ತಿರವಿರುವ ಲಕ್ಷ್ಮಿ ಸುಜುಕಿ ಹಾಗೂ ಹದಡಿ ರಸ್ತೆಯ ಲಕ್ಷ್ಮಿ ಸುಜುಕಿ ಶೋರೂಮ್‌ಗಳಲ್ಲಿ ಲಭ್ಯವಿರುತ್ತದೆ ಎಂದು ತಿಳಿಸಿದ್ದಾರೆ.

ಕಾರ್ಯಕ್ರಮದಲ್ಲಿ ಹಿತೇಷ್ ಹಾಗೂ ಶೋ ರೋಮ್ ನ ಸಿಬ್ಬಂದಿ ವರ್ಗದ ವರು ಉಪಸ್ಥಿತರಿದ್ದರು.

## ಕಾಯಕದ ಜೊತೆಗೆ ಸಾಮಾಜಿಕ ಪಿಡುಗುಗಳ ವಿರುದ್ಧದ ಹೋರಾಟದಲ್ಲಿ ಕಾಯಕ ಶರಣರ ಪಾತ್ರ ಶ್ಲಾಘನೀಯ



ದಾವಣಗೆರೆ, ಫೆ. 10 - ಹನ್ನೆರಡನೇ ಶತಮಾನ ಶಿವಶರಣರ ಶತಮಾನವಾಗಿದ್ದು, ಕಾಯಕದ ಜತೆಗೆ ಹಿಂದುಳಿದ ವರ್ಗಗಳ ಏಳಿಗೆಗಾಗಿ ತಮ್ಮ ವಚನಗಳ ಮೂಲಕ ಸಮಾಜ ಸುಧಾರಿಸುವ ಕೆಲಸ ಮಾಡಿದರು ಎಂದು ಅಪರ ಜಿಲ್ಲಾಧಿಕಾರಿ ಪಿ.ಎನ್.ಲೋಕೇಶ್ ತಿಳಿಸಿದರು.

ಇಲ್ಲಿನ ಜಿಲ್ಲಾಧಿಕಾರಿ ಕಚೇರಿಯ ತುಂಗಭದ್ರಾ ಸಭಾಂಗಣದಲ್ಲಿ ಜಿಲ್ಲಾಡಳಿತ, ಜಿಲ್ಲಾ ಪಂಚಾಯತ್, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯಿಂದ ಇಂದು ಆಯೋಜಿಸಲಾಗಿದ್ದ ಕಾಯಕ ಶರಣರ ಜಯಂತಿಯನ್ನು ಉದ್ಘಾಟಿಸಿ ಅವರು ಮಾತಾನಾಡಿದರು.

ತಾರತಮ್ಯ, ಅಸಮಾನತೆ, ಲಿಂಗ ತಾರತಮ್ಯ, ಜಾತಿಭೇದ ಎಂಬ ಅನೇಕ ಸಾಮಾಜಿಕ ಪಿಡುಗುಗಳ ವಿರುದ್ಧ ಹೋರಾಡಿದವರು ಶರಣರು, ಈ ಮೂಲಕ ಕಾಯಕ ಶರಣರು ಸಮಾಜಕ್ಕೆ ತಮ್ಮದೇ ಆದ ಕೊಡುಗೆಯನ್ನು ನೀಡಿದ್ದಾರೆ. ಕಲ್ಯಾಣದ ಕ್ರಾಂತಿಯಲ್ಲಿ ಇಡೀ ಶರಣರ ಹೋರಾಟವಿದೆ. ಬಸವ ಕಲ್ಯಾಣ ಎಂಬುವುದು ಒಬ್ಬರಿಂದ ಮಾತ್ರವಲ್ಲದೇ ಸಮಾಜದ ಕಟ್ಟ ಕಡೆಯಿಂದ ಬಂದ ಈ ಐದು ಜನ ಕಾಯಕ ಶರಣರ ಪಾತ್ರ ಪ್ರಮುಖವಾಗುತ್ತದೆ. ಇವರ ಬಗ್ಗೆ ಬಸವಣ್ಣನವರು ಅನೇಕ ಹೇಳಿಕೆಗಳನ್ನು ನೀಡಿದ್ದಾರೆ. ಒಬ್ಬ ಅಜ್ಞಾನವಂತನೂ ಸಹ ಪರಿವರ್ತನೆಯಿಂದ ಮಹಾಜ್ಞಾನಿಯಾಗುತ್ತಾನೆ ಎಂದರು.

ಸತ್ಯ, ಶುದ್ಧ ಕಾಯಕದ ಮೂಲಕ ಜೀವನ ನಡೆಸುವ ಕುರಿತಂತೆ ಅಂದಿನ ಅನೇಕ ವಚನಕಾರರು ತಮ್ಮ ಮೊನಚಾದ ವಚನಗಳ ಮೂಲಕ ಸಮಾಜವನ್ನು ತಿದ್ದುವ ಕಾರ್ಯ ಮಾಡಿದ್ದರು. ಅವರ ವಚನಗಳು ಇಂದಿನ ಸಮಾಜಕ್ಕೂ ಪ್ರಸ್ತುತವಾಗಿವೆ. ಅವರು ನೀಡಿರುವ ಸಂದೇಶಗಳನ್ನು ಎಲ್ಲರೂ ಪಾಲಿಸಿದಲ್ಲಿ, ಉತ್ತಮ ಸಮಾಜ ನಿರ್ಮಾಣಕ್ಕೆ ಸಹಕಾರಿಯಾಗುತ್ತದೆ ಎಂದರು.

ಹಿರಿಯ ಸಾಹಿತಿ ಡಾ. ಎ.ಬಿ. ರಾಮಚಂದ್ರಪ್ಪ ಮಾತನಾಡಿ, ಕಾಯಕ ಶರಣರಾದ ಮಾದಾರ ಚೆನ್ನಯ್ಯ, ಮಾದಾರ ದೂಳಯ್ಯ, ಸಮಗಾರ ಹರಳಯ್ಯ, ಡೋಹರ ಕಕ್ಕಯ್ಯ ಹಾಗೂ ಉರಿಲಿಂಗ ಪೆದ್ದಿ ಇವರ ವಚನಗಳ ಬಗ್ಗೆ ಶಾಲಾ, ಕಾಲೇಜುಗಳಲ್ಲಿ ಮಕ್ಕಳಿಗೆ ಓದಿಸುವುದರ ಜತೆಗೆ ಅವುಗಳನ್ನು ವಿಮರ್ಶೆಗೊಳಪಡಿಸಬೇಕು.

ಆ ನಿಟ್ಟಿನಲ್ಲಿ ಶಿಕ್ಷಕರು ಮುನ್ನಡೆದಾಗ ಸಮಾಜದಲ್ಲಿ ಬದಲಾವಣೆ ತರಲು ಸಾಧ್ಯವಾಗುತ್ತದೆ ಎಂದು ಹೇಳಿದರು.

ಕಲಾವಿದರಾದ ಹೆಗ್ಗೆರೆ ರಂಗಪ್ಪ ಮತ್ತು ಕಲಾ ತಂಡದವರಿಂದ ವಚನ ಗಾಯನ ನಡೆಸಲಾಯಿತು. ದೂಡಾ ಅಧ್ಯಕ್ಷ ದಿನೇಶ್.ಕೆ.ಶೆಟ್ಟಿ, ಪರಿಶಿಷ್ಟ ವರ್ಗಗಳ ಕಲ್ಯಾಣ ಇಲಾಖೆ ನವೀನ್ ಮಠದ್, ಡಿಡಿಪಿಐ ಕೊಟ್ರೇಶ್, ಮುಖಂಡರಾದ ಮಂಜುನಾಥ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ ಸಹಾಯಕ ನಿರ್ದೇಶಕ ರವಿಚಂದ್ರ ಹಾಗೂ ಇನ್ನಿತರರು ಉಪಸ್ಥಿತರಿದ್ದರು.

## ರಾಷ್ಟ್ರಪತಿ ಮುರ್ಮು ಪವಿತ್ರ ಸ್ನಾನ



ಮಹಾಕುಂಭ ನಗರ, ಫೆ. 10 - ರಾಷ್ಟ್ರಪತಿ ದ್ರೌಪದಿ ಮುರ್ಮು ಅವರು ಮಹಾಕುಂಭ ಮೇಳಕ್ಕೆ ಭೇಟಿ ನೀಡಿದ್ದು ತ್ರಿವೇಣಿ ಸಂಗಮದಲ್ಲಿ ಪವಿತ್ರ ಸ್ನಾನ ಮಾಡಿದ್ದಾರೆ. ಸಂಗಮದಲ್ಲಿ ಸ್ನಾನ ಮಾಡಿದ ನಂತರ ಅವರು ಗಂಗಾ ಮಾತೆ ಹಾಗೂ ಸೂರ್ಯ ದೇವರಿಗೆ ಪೂಜೆ ಸಲ್ಲಿಸಿದ್ದಾರೆ. ರಾಷ್ಟ್ರಪತಿ ಮುರ್ಮು ಅವರು ದೋಣಿಯಲ್ಲಿ ಸಂಗಮ್ ಘಾಟ್‌ಗೆ ತೆರಳಿದರು. ಈ ಸಂದರ್ಭದಲ್ಲಿ ಅವರ ಜೊತೆ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಉಪಸ್ಥಿತರಿದ್ದರು.

## ಕ್ರೀಡಾಪಟುಗಳಿಂದ ಅರ್ಜಿ ಅಹ್ವಾನ

ಸಂತೇಬೆನ್ನೂರು, ಫೆ.10- ಸಂತೇಬೆನ್ನೂರಿನ ಚೈತನ್ಯ ಗುರುಕುಲ ಆಂಗ್ಲ ಮಾಧ್ಯಮ ವಸತಿಯುತ ಶಾಲೆಯಲ್ಲಿ ಅಥ್ಲೆಟಿಕ್ಸ್, ಮಲ್ಲಕಂಬ, ಯೋಗ, ಕರಾಟೆ ಈ ಕ್ರೀಡೆಗಳ ಆಯ್ಕೆ ಪ್ರಕ್ರಿಯೆ ನಡೆಯಲಿದ್ದು, ಕ್ರೀಡಾಪಟುಗಳು ಅರ್ಜಿಯನ್ನು ಅಧ್ಯಕ್ಷರು, ಚೈತನ್ಯ ಟ್ರಸ್ಟ್, ಸಂತೆಬೆನ್ನೂರು ಈ ವಿಳಾಸಕ್ಕೆ ಇದೇ ದಿನಾಂಕ 26 ರೊಳಗಾಗಿ ಸಲ್ಲಿಸಬೇಕು.

5ನೇ ತರಗತಿಯಿಂದ 9ನೇ ತರಗತಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು ಅರ್ಜಿ ಸಲ್ಲಿಸಬೇಕು. ವಿವರಕ್ಕೆ ಸಂಪರ್ಕಿಸಿ : ಮೊ: 9986739247, 8197691281.

## ಧರ್ಮಗುರುಗಳು, ರಾಜಕಾರಣಿಗಳು, ಮಾಧ್ಯಮದವರು, ಅಧಿಕಾರಿಗಳು ದೇವರ ಏಜೆಂಟರಿದ್ದಂತೆ

ಭರಮಸಾಗರ, ಫೆ. 10- ಮಾಧ್ಯಮ ಸಮಾಜದ ಒಂದು ಭಾಗವಾಗಿದ್ದು, ಸ್ವಾರ್ಥದ ಜೀವನದಲ್ಲಿದ್ದಾಗ ಸತ್ ಚಿಂತನೆಗಳಿರುವುದಿಲ್ಲ. ರೈತರಿಗೆ ಸ್ವಾರ್ಥದ ಅರಿವು ಸಹ ಇರುವುದಿಲ್ಲ. ಅವರು ಅವರ ಕೃಷಿ ಕಾಯಕದಲ್ಲಿ ಮಗ್ನರಾಗಿರುತ್ತಾರೆ. ಯಾವುದೇ ಸಂಸ್ಕೃತಿ ತಂತ್ರಜ್ಞಾನದಲ್ಲಿ ಸಿಗುವುದಿಲ್ಲ ಎಂದು ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್. ರಂಗನಾಥ್ ಹೇಳಿದರು.

ಭರಮಸಾಗರದ ತರಳಬಾಳು ಹುಣ್ಣಿಮೆ ಮಹೋತ್ಸವದ ಏಳನೇ ದಿನದ ಕಾರ್ಯಕ್ರಮದಲ್ಲಿ 'ಸಮೂಹ ಮಾಧ್ಯಮ ಮತ್ತು ಸಮಾಜ' ವಿಷಯ ಕುರಿತು ಮಾತನಾಡಿದರು.

ಮಾಧ್ಯಮ ಈ ಹಿಂದೆ ಇದ್ದಂತೆ ಇಲ್ಲ. ಬಹಳಷ್ಟು ಬದಲಾಗಿದೆ. ಮೊಬೈಲ್ ಕೂಡ ಚಾಕುವಿದ್ದಂತೆ ಅದರಿಂದ ಅದ್ಭುತ ಜ್ಞಾನ ಸಂಪಾದನೆ ಮಾಡಬಹುದು. ಸ್ವಲ್ಪ ಯಾಮಾರಿದರೆ ಜೀವನದ ಮಾರಕಕ್ಕೂ ಬಳಕೆಯಾಗುತ್ತಿದೆ. ಆಯ್ಕೆ ನಮ್ಮದು. ಮಾಧ್ಯಮ ಹುಟ್ಟಿದ್ದು ಸಮಾಜದಿಂದ ಆದರೂ ಸಹ ಅದು ಸ್ವಾರ್ಥದ ಕಡೆ ಬದಲಾಗುತ್ತಿದೆ. ಯಾವುದು ಕೂಡ ನಮ್ಮ ಆಸ್ತಿಯಲ್ಲ. ಜೀವನದಲ್ಲಿ ನಾವು ನಾಲ್ಕು ಜನರಿಗೆ ನೆರವಾಗುವ ಮನೋಭಾವನೆಯನ್ನು ಬೆಳೆಸಿಕೊಳ್ಳಬೇಕಾಗಿದೆ ಎಂದರು.

ಧರ್ಮಗುರುಗಳು, ರಾಜಕಾರಣಿಗಳು, ಮಾಧ್ಯಮದವರು, ಅಧಿಕಾರಿಗಳು ದೇವರ ಏಜೆಂಟರಿದ್ದಂತೆ. ಎಲ್ಲರೂ ಜನಹಿತಕ್ಕಾಗಿ ಕೆಲಸ ಮಾಡುವಂತಾಗಬೇಕು ಎಂಬುದು ದೇವರ ನಿರೀಕ್ಷೆ ಎಂದು ಹೇಳಿದರು.

ಕೇರಳ ರಾಜ್ಯದ ಕನ್ನೂರು ಪೊಲೀಸ್ ಮಹಾನಿರೀಕ್ಷಕ ಯತೀಶ್ಚಂದ್ರ ಮಾತನಾಡಿ, ಸಾಮಾಜಿಕ ಜಾಲತಾಣಗಳಲ್ಲಿ ಬರುವ ಎಲ್ಲಾ ವಿಚಾರಗಳು ಸರಿ ಇರುತ್ತವೆ ಎಂದು ಹೇಳಲಿಕ್ಕಾಗದು. ತಪ್ಪು ಎಂದು ಹೇಳಲಾಗದು. ಕೆಲವು ವಿಚಾರಗಳು ನಮ್ಮ ಬುದ್ದಿಮಟ್ಟವನ್ನು ಹೆಚ್ಚಿಸುವಲ್ಲಿ ಸಹಕಾರಿಯಾಗುತ್ತವೆ. ಮತ್ತೊಂದು ಕಡೆ ಮಾನಸಿಕ ಸ್ವಾಸ್ಥ್ಯ ಹಾಳು ಮಾಡುವಂತಹ ವಿಚಾರಗಳು ಇರುತ್ತವೆ. ಇತ್ತೀಚಿನ ದಿನಗಳಲ್ಲಿ ಸೈಬರ್ ಕ್ರೈಮ್‌ಗೆ ಹೆಚ್ಚು ಮಕ್ಕಳು ಗುರಿಯಾಗುತ್ತಿದ್ದಾರೆ ಎಂದರು.

ವಿಸ್ತಾರ ನ್ಯೂಸ್‌ನ ಎಂ.ಎಸ್. ಶರತ್ ಮಾತನಾಡಿ, ಸರ್ಕಾರದ ಕೆಲವು ಯೋಜನೆಗಳ ಮಾಹಿತಿ ಪಡೆದು ಹಣ ಉಳಿತಾಯ ಮಾಡಬಹುದು. ಮದುವೆ ಮತ್ತಿತರೆ ಶುಭ ಸಮಾರಂಭಗಳಿಗೆ ವಿನಾಕಾರಣ ದುಂದುವೆಚ್ಚ ಮಾಡಿ ಹಣ ಕಳೆದುಕೊಳ್ಳುವ ಬದಲು ಅದೇ ಹಣವನ್ನು ವಿಮೆ, ಇನ್ನಿತರೆ ಕಡೆಗಳಲ್ಲಿ ಹೂಡಿಕೆ ಮಾಡಿ ತಮ್ಮ ಆದಾಯದ ಮೂಲಗಳನ್ನು ಹೆಚ್ಚಿಸಿಕೊಳ್ಳಲು ಸಾಧ್ಯವಿದೆ ಎಂದರು.



ತರಳಬಾಳು ಹುಣ್ಣಿಮೆ ಮಹೋತ್ಸವದಲ್ಲಿ ಪಬ್ಲಿಕ್ ಟಿವಿ ಮುಖ್ಯಸ್ಥ ಹೆಚ್.ಆರ್. ರಂಗನಾಥ್

ವಿಜಯ ಕರ್ನಾಟಕ ಸಂಪಾದಕ ಸುದರ್ಶನ್ ಚನ್ನಂಗಿಹಳ್ಳಿ ಮಾತನಾಡಿ, ಡಿಜಿಟಲ್ ತಂತ್ರಜ್ಞಾನ ಎಷ್ಟೇ ಮುಂದುವರೆದರೂ ಪುಸ್ತಕಗಳು ಮತ್ತು ಪತ್ರಿಕೆಗಳು ಮಕ್ಕಳಲ್ಲಿ ಮೌಲ್ಯಗಳನ್ನು ಹೆಚ್ಚಿಸುವಲ್ಲಿ ಪ್ರಮುಖ ಪಾತ್ರ ವಹಿಸುತ್ತವೆ. ಮಕ್ಕಳಲ್ಲಿ ಪತ್ರಿಕೆ ಓದುವ ಹವ್ಯಾಸವನ್ನು ರೂಢಿ ಮಾಡಿಸಿ ಎಂದರು.

ಇದೀಗ ನಾವು ಡಿಜಿಟಲ್ ಯುಗದಲ್ಲಿದ್ದೇವೆ. ಪ್ರತಿ ಐದು ವರ್ಷಗಳಿಗೊಮ್ಮೆ ತಂತ್ರಜ್ಞಾನ ಬದಲಾಗುತ್ತಾ ಹೋಗುತ್ತದೆ. ಮುಂದೆ ಕೂಡ ಬದಲಾಗಬಹುದು. ತಂತ್ರಜ್ಞಾನಕ್ಕೆ ತಕ್ಷಣ ತೆರೆದುಕೊಳ್ಳುವ ಮಕ್ಕಳನ್ನು ಅದರಿಂದ ದೂರ ಮಾಡಬಾರದು. ಕೋವಿಡ್ ಸಂದರ್ಭದಲ್ಲಿ ಮಕ್ಕಳಿಗೆ ಮೊಬೈಲ್ ಪರಿಚಯಿಸಿದ್ದೇವೆ. ಮೊಬೈಲ್ ಹೇಗೆ ಬಳಕೆ ಮಾಡುತ್ತಾರೆ ಎಂಬುದನ್ನು ಪೋಷಕರು ನಿಗಾವಹಿಸಬೇಕು ಎಂದರು.

ಮಾಧ್ಯಮಕ್ಕೆ ಒಂದು ಚೌಕಟ್ಟಿದೆ. ಆ ಚೌಕಟ್ಟು ಮೀರಿದ ಮಾಧ್ಯಮವನ್ನು ಜನ ಸಾರಾಸಗಟಾಗಿ ತಿರಸ್ಕರಿಸುತ್ತಾರೆ. ಆ ಸ್ವಾತಂತ್ರ್ಯ ಸಮಾಜಕ್ಕಿದೆ. ನಕಾರಾತ್ಮಕ ಸುದ್ದಿಗಳು ಶೇ 20 ರಷ್ಟಿದ್ದರೆ. ಸಕಾರಾತ್ಮಕ, ಮಾಹಿತಿಯುಳ್ಳ ಸುದ್ದಿಗಳು ಶೇ. 80 ರಷ್ಟು ಇರುತ್ತವೆ. ಆಯ್ಕೆ ನಿಮ್ಮ ಕೈಯ್ಯಲಿದೆ. ಸಕಾರಾತ್ಮಕತೆ ಕಡೆ ಮಕ್ಕಳನ್ನು ಕೊಂಡೊಯ್ಯಬೇಕು. ಪುಸ್ತಕ ಮತ್ತು ಪತ್ರಿಕೆಗಳನ್ನು ಓದಲು ಕೊಡಿ ಎಂದು ಮನವಿ ಮಾಡಿದರು.

ರಾಜನಹಳ್ಳಿ ವಾಲ್ಮೀಕಿ ಗುರುಪೀಠದ ಶ್ರೀ ಪ್ರಸನ್ನಾನಂದಪುರಿ ಸ್ವಾಮೀಜಿ ಸಾನ್ನಿಧ್ಯ ವಹಿಸಿದ್ದರು. ಸಾಧು ಸದ್ಧರ್ಮ ವೀರಶೈವ ಸಂಘದ ಅಧ್ಯಕ್ಷ ಹೆಚ್. ಆರ್. ಬಸವರಾಜಪ್ಪ, ಜಗಳೂರು ಮಾಜಿ ಶಾಸಕ ಹೆಚ್.ಪಿ. ರಾಜೇಶ್ ಸೇರಿದಂತೆ ಅನೇಕ ಗಣ್ಯರು ಉಪಸ್ಥಿತರಿದ್ದರು.

ಮೀಡಿಯಾ ಮಾಸ್ಟರ್ ವಿಮರ್ಶಕ ಎಂ.ಎಸ್. ರಾಘವೇಂದ್ರ, ದಾವಣಗೆರೆ ಪೂರ್ವ ವಲಯ ಐಜಿಪಿ ಡಾ. ಬಿ. ಆರ್. ರವಿಕಾಂತೇಗೌಡ, ಜಿಲ್ಲಾಧಿಕಾರಿ ಜಿ.ಎಂ. ಗಂಗಾಧರಸ್ವಾಮಿ, ಮಾಜಿ ಶಾಸಕ ಬೆಳ್ಳಿ ಪ್ರಕಾಶ್, ವಿಧಾನ ಪರಿಷತ್ ಸದಸ್ಯ ಕೆ.ಎಸ್. ನವೀನ್ ಮಾತನಾಡಿದರು.

ಡಿವೈಎಸ್ಪಿ ರುದ್ರಪ್ಪ ಉಜ್ಜನಕೊಪ್ಪ ಅವರು ವಚನ ಗೀತೆ ಹಾಡಿದರು. ತೀರ್ಥಪ್ಪ ಚಿಕ್ಕಬೆನ್ನೂರು ಸ್ವಾಗತಿಸಿದರು. ವಿವಿಧ ಸಾಂಸ್ಕೃತಿಕ ಕಾರ್ಯಕ್ರಮಗಳು ಹಾಗೂ ಪ್ರಕಾಶ್ ಹೆಮ್ಮಾಡಿ, ನೇತ್ರಾವತಿ ಹೆಮ್ಮಾಡಿ ಅವರ ಜಾದೂ ಪ್ರದರ್ಶನ ಗಮನ ಸೆಳೆದವು.

## ನಗರದ ರೇಣುಕಾ ಯಲ್ಲಮ್ಮ ದೇವಸ್ಥಾನದಲ್ಲಿಂದು ಹೋಮ



ಯಲ್ಲಮ್ಮ ನಗರದ 4ನೇ ಮೇನ್, 4ನೇ ಕ್ರಾಸ್‌ನಲ್ಲಿನ ಶ್ರೀನ ರೇಣುಕಾ ಯಲ್ಲಮ್ಮ ದೇವಿ ದೇವಸ್ಥಾನ ಸೇವಾ ಸಮಿತಿಯಿಂದ 25ನೇ ವರ್ಷದ ಬೆಳ್ಳಿ ಮಹೋತ್ಸವದ ಪ್ರಯುಕ್ತ ಇಂದು ಬೆಳಿಗ್ಗೆ 9.30ಕ್ಕೆ ಚಂಡಿಕಾ ಹೋಮ ಜರುಗಲಿದೆ.

ನಾಳೆ ಬುಧವಾರ ಭಾರತ ಹುಣ್ಣಿಮೆ ಕಾರ್ಯಕ್ರಮವಿರುತ್ತದೆ. ಪ್ರಾತಃಕಾಲ ಶ್ರೀ ಜಗನ್ಮಾತೆ ರೇಣುಕಾ ಯಲ್ಲಮ್ಮದೇವಿಗೆ ಸುಮಂಗಲಿಯವರಿಂದ ಸಕಲ ವಾದ್ಯಗಳೊಂದಿಗೆ ಗಂಗಾ ಜಲವನ್ನು ತರುವುದು ಹಾಗೂ ಮಧ್ಯಾಹ್ನ 12ಕ್ಕೆ ಮಹಾಮಂಗಳಾರತಿ ನಡೆಯುತ್ತದೆ. ನಂತರ ಮಧ್ಯಾಹ್ನ 1 ಗಂಟೆಗೆ ಅನ್ನ ಸಂತರ್ಪಣೆ ಏರ್ಪಡಿಸಲಾಗಿದೆ.

## ವಾಸುದೇವ ನಾಯಕ ಅವರಿಗೆ ಪಿಹೆಚ್‌ಡಿ



ದಾವಣಗೆರೆ, ಫೆ. 10- ನಗರದ ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯದ ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ ವಾಸುದೇವ ನಾಯಕ ಕೆ.ಬಿ.ಎಲ್. ಅವರಿಗೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾಲಯವು ತನ್ನ 24ನೇ ಘಟಿಕೋತ್ಸವದಲ್ಲಿ ಪಿ.ಹೆಚ್.ಡಿ. ಪದವಿ ನೀಡಿದೆ. ವಾಸುದೇವ ನಾಯಕ ಅವರು ಪ್ರೊ. ಬಿ.ಇ. ರಂಗಸ್ವಾಮಿ ಹಾಗೂ ಪ್ರೊ. ಚಂದ್ರಶೇಖರ್ ಅವರ ಮಾರ್ಗದರ್ಶನದಲ್ಲಿ ಮೌಲ್ಯವರ್ಧಿತ ಮತ್ತು ಆಪ್ಟಿಮೈಜ್ಡ್ ಟ್ರಾನ್ಸ್‌ಎಸ್ಟೆರಿಫಿಕೇಶನ್ ಪ್ರಕ್ರಿಯೆಯ ಮೂಲಕ ಕೋಳಿ ಸಾಕಾಣೆಯ ತ್ಯಾಜ್ಯದಿಂದ ಜೈವಿಕ ಇಂಧನ ಉತ್ಪಾದನೆ ಮತ್ತು ಪರ್ಯಾಯ ಇಂಧನ ಸಂಪತ್ತಾಗಿ ಅದರ ಪರಿಣಾಮಕಾರಿ ಅನುಷ್ಠಾನ' ವಿಷಯದ ಮೇಲೆ ನಡೆಸಿದ ಸಂಶೋಧನೆಗೆ ಈ ಪದವಿ ನೀಡಲಾಗಿದೆ.

## ಹೊನ್ನಾಳಿ : ಸಂಭ್ರಮದ ದಿಂಡಿ-ರಥೋತ್ಸವ



ಹೊನ್ನಾಳಿ, ಫೆ. 10 - ಪಟ್ಟಣದ ಪಾಂಡುರಂಗ ರಥೋತ್ಸವವು ಭಾನುವಾರ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ನಡೆಸಲಾಯಿತು.

ನಾಮದೇವ ಸಿಂಪಿ ಸಮಾಜದ ಅಧ್ಯಕ್ಷ ಹರಿ ಹೋವಳೆ, ಉಪಾಧ್ಯಕ್ಷ ಪ್ರೇಮನಾಥ, ಗಣಪತಿ ಹೋವಳೆ, ಸಮಿತಿ ಪದಾಧಿಕಾರಿಗಳಾದ ಗಣೇಶ, ನಾಮದೇವ, ಮಂಜುನಾಥ, ಆನಂದರಾವ್, ಗಣೇಶ, ಗೋಪಾಲರಾವ್ ಸೇರಿದಂತೆ ಭಜನಾ ಮಂಡಳಿ, ಸಾಂಸ್ಕೃತಿಕ ಸೇವಾ ಸಂಘ, ರುಕ್ಮಿಣಿ ಮಹಿಳಾ ಮಂಡಳಿ, ಯುವ ಮಂಡಳಿಯವರು ಮೆರವಣಿಗೆಯಲ್ಲಿ ಪಾಲ್ಗೊಂಡಿದ್ದರು.

## ನಾಟಕಗಳಿಗೆ ಪರಿಣಾಮಕಾರಿ ಸಾಹಿತ್ಯ ಮುಖ್ಯ : ಡಾ.ಚೌಗಲೆ



ಕೊಂಡಜ್ಜಿ, ಫೆ 10 - ಹಾಸ್ಯ, ಚಾರಿತ್ರಿಕ, ಸಾಮಾಜಿಕ, ಪೌರಾಣಿಕ ಯಾವುದೇ ನಾಟಕಗಳಾಗಲೀ ಅದಕ್ಕೆ ರಚಿಸುವ ಸಾಹಿತ್ಯ ಪರಿಣಾಮಕಾರಿಯಾಗಿದ್ದರೆ ಮಾತ್ರ ಪ್ರೇಕ್ಷಕರನ್ನು ತಲುಪುತ್ತದೆ. ಜೊತೆಗೆ ಸಮಾಜಕ್ಕೊಂದು ಜವಾಬ್ದಾರಿಯನ್ನು ಹೆಚ್ಚಿಸುತ್ತದೆ. ಮುಂದೊಂದು ದಿನ ಪುನಃ ರಂಗಭೂಮಿ ಕಳೆದುಕೊಂಡ ವೈಭವವನ್ನು ಮರಳಿ ಪಡೆಯಲಿದೆ ಎಂದು ರಂಗ ತಜ್ಞ ಡಾ. ಡಿ.ಎಸ್. ಚೌಗಲೆ ಅವರು ಆಶಯ ವ್ಯಕ್ತಪಡಿಸಿದರು.

ಹರಿಹರ ತಾಲ್ಲೂಕಿನ ಕೊಂಡಜ್ಜಿಯ ಸ್ಕೌಟ್ ಕ್ಯಾಂಪ್‌ನಲ್ಲಿ ವೃತ್ತಿ ರಂಗಭೂಮಿ ರಂಗಾಯಣ (ದಾವಣಗೆರೆ), ಕರ್ನಾಟಕ ನಾಟಕ ಅಕಾಡೆಮಿ, (ಬೆಂಗಳೂರು) ಇವರ ಸಹಯೋಗದೊಂದಿಗೆ ಇಂದು ಏರ್ಪಡಿಸಿದ್ದ ವೃತ್ತಿ ರಂಗನಾಟಕ ಎರಡನೇ ದಿನದ ರಚನಾ ಶಿಬಿರದಲ್ಲಿ ಸಂಪನ್ಮೂಲ ವ್ಯಕ್ತಿಯಾಗಿ ಪಾಲ್ಗೊಂಡು ಅವರು ಮಾತನಾಡಿದರು.

ಶಿಬಿರದ ಸಂಪನ್ಮೂಲ ವ್ಯಕ್ತಿಯಾಗಿದ್ದ ಡಾ. ರಾಮಕೃಷ್ಣ ಮರಾಠೆ ಮಾತನಾಡಿ ರಂಗಭೂಮಿಯ ಸಾಹಿತ್ಯ ಹಿಂದಿನ ಪೀಳಿಗೆಯಲ್ಲಿ ಸದಾ ಚೇತೋಹಾರಿಯಾಗಿತ್ತು. ಆದರೆ ಇಂದಿನ ಪೀಳಿಗೆ ಅದನ್ನು ದಾಟಿಸುವ ಜವಾಬ್ದಾರಿ ಹೊತ್ತುಕೊಳ್ಳಬೇಕಿದೆ. ಇಂತಹ ಶಿಬಿರಗಳಿಂದ ನಾಟಕಗಳ ಇಹ ಮತ್ತು ಪರಗಳ ಆಳ, ಹರಿವು ತಿಳಿಯುತ್ತದೆ. ಇದರೊಂದಿಗೆ ತಾತ್ವಿಕ ಸಂಸ್ಕಾರ ಹಾಗೂ ಜ್ಞಾನ ಅಧ್ಯಾತ್ಮಿಕದ ಅರಿವು ಒಂದು ರಾತ್ರಿ ಕಳೆಯುವುದರೊಳಗಾಗಿ ಸಮಾಜವನ್ನು ಮುಟ್ಟುವ ಶಕ್ತಿ ರಂಗಭೂಮಿಗಿದೆ ಎಂದರು.

ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದ ದಾವಣಗೆರೆ ವೃತ್ತಿ ರಂಗಾಯಣ ನಿರ್ದೇಶಕ ಮಲ್ಲಿಕಾರ್ಜುನ ಕಡಕೋಳ ಶಿಬಿರಾರ್ಥಿಗಳೊಂದಿಗೆ ಅಲ್ಲಲ್ಲಿ ಸಂವಾದ ನಡೆಸಿ ಒಟ್ಟಾರೆ ರಂಗಭೂಮಿಯ ಚಿಂತನೆಗಳ ಬಗ್ಗೆ ಶಿಬಿರಾರ್ಥಿಗಳಿಗೆ ಮನವರಿಕೆ ಮಾಡಿದರು.

ಕಾರ್ಯಕ್ರಮದಲ್ಲಿ ಶಿಬಿರದ ನಿರ್ದೇಶಕ ಬಸವರಾಜ ಪಂಚಗಲ್ ಉಪಸ್ಥಿತರಿದ್ದರು. ಶಿಬಿರದಲ್ಲಿ ಆರು ಮಂದಿ ಮಹಿಳೆಯರು ಸೇರಿದಂತೆ ರಾಜ್ಯಾದ್ಯಂತ ಇಪ್ಪತ್ತು ಮಂದಿ ಶಿಬಿರಾರ್ಥಿಗಳು ಭಾಗವಹಿಸಿ ಸಂವಾದ ನಡೆಸಿದರು.


ಫ್ಲಾಟ್‌ಗಳು ಮಾರಾಟಕ್ಕಿವೆ

ದಾವಣಗೆರೆ ಸಿಟಿ ಎಸ್.ಎಸ್. ಬಡಾವಣೆ, ಎ ಬ್ಲಾಕ್, ಇಂಡೋರ್ ಸ್ಟೇಡಿಯಂ ಹತ್ತಿರ ನಿರ್ಮಿಸಿರತಕ್ಕ ಅಪಾರ್ಟ್‌ಮೆಂಟ್‌ನಲ್ಲಿ 2 BHK, ಗ್ರಾನೈಟ್ ಫ್ಲೋರಿಂಗ್, ವಾರ್ಡ್‌ರೂಪ್, ದೇವರಮನೆ, ನೀರಿನ ಸೌಕರ್ಯ, ಲಿಫ್ಟ್ ಸೌಕರ್ಯ, ಕಾರ್ ಪಾರ್ಕಿಂಗ್ ಸೌಲಭ್ಯವುಳ್ಳ ಫ್ಲಾಟ್‌ಗಳು ರಿಯಾಯ್ತಿ ದರದಲ್ಲಿ ಮಾರಾಟಕ್ಕಿವೆ

ಬಿ.ಎಸ್. ಸಂತೋಷ, 96322 67555



ವಾಸುದೇವ ನಾಯಕ ಕೆ.ಬಿ.ಎಲ್ ಅವರಿಗೆ ಪಿಹೆಚ್‌ಡಿ ಪದವಿ



ಬಾಪೂಜಿ ತಾಂತ್ರಿಕ ಮಹಾವಿದ್ಯಾಲಯ ಜೈವಿಕ ತಂತ್ರಜ್ಞಾನ ವಿಭಾಗದ ಸಹಾಯಕ ಪ್ರಾಧ್ಯಾಪಕ **ವಾಸುದೇವ ನಾಯಕ ಕೆ.ಬಿ.ಎಲ್.** ಇವರು, **ಪ್ರೊ. ರಂಗಸ್ವಾಮಿ ಬಿ.ಇ.** ಹಾಗೂ **ಪ್ರೊ. ಚಂದ್ರಶೇಖರ್ ಯು.** ಇವರ ಮಾರ್ಗದರ್ಶನದಲ್ಲಿ ಮಂಡಿಸಿದ **"ವರ್ಧಿತ ಮತ್ತು ಆಪ್ಟಿಮೈಜ್ಡ್ ಟ್ರಾನ್ಸ್‌ಎಸ್ಟೆರಿಫಿಕೇಶನ್ ಪ್ರಕ್ರಿಯೆಯ ಮೂಲಕ ಕೋಳಿ ಸಾಕಾಣೆಯ ತ್ಯಾಜ್ಯದಿಂದ ಜೈವಿಕ ಇಂಧನ ಉತ್ಪಾದನೆ ಮತ್ತು ಪರ್ಯಾಯ ಇಂಧನ ಸಂಪತ್ತಾಗಿ ಅದರ ಪರಿಣಾಮಕಾರಿ ಅನುಷ್ಠಾನ"** ಎಂಬ ಮಹಾಪ್ರಬಂಧಕ್ಕೆ ಬೆಳಗಾವಿ ವಿಶ್ವೇಶ್ವರಯ್ಯ ತಾಂತ್ರಿಕ ವಿಶ್ವವಿದ್ಯಾನಿಲಯ **ಪಿಹೆಚ್‌ಡಿ** ಪದವಿ ನೀಡಿ ಗೌರವಿಸಿದೆ.





ಇವರಿಗೆ ಶುಭ ಕೋರುವವರು

ಶ್ರೀ ಪಿ. ರುದ್ರೇಶಿ, ಎಲ್‌ಐಸಿ ನಿವೃತ್ತ ಆಫೀಸರ್
ಶ್ರೀಮತಿ ಅನಿತಾ ರುದ್ರೇಶಿ
ಶ್ರೀಮತಿ ಜೀವಿತಾ ಶಿವಪ್ಪನಾಯಕ
ಶ್ರೀ ಟಿ. ಶಿವಪ್ಪ ನಾಯಕ ಎಂ.ಎಸ್.ಸಿ.
ಶ್ರೀ ಆರ್. ರಾಕೇಶ್ ನಾಯಕ, ಶ್ರೀ ಡಿ. ಸತೀಶ್,
ಶ್ರೀಮತಿ ಕೆ.ವೀಣಾ, ಡಿ. ಕವಿತಾ ಎಂ. ರವಿಕುಮಾರ್
ಶ್ರೀ ಬಿ. ಹನುಮಂತಪ್ಪ, ಶ್ರೀಮತಿ ಡಿ.ಸುಜಾತ
ಡಿ. ಸುನಿತಾ ನಾಗರಾಜ್

# ಸಂತ ಸೇವಲಾಲ್ ಪ್ರಶಸ್ತಿಗೆ ಸಾಹಿತಿ ಬಿ.ಟಿ. ಲಲಿತಾ ನಾಯಕ್ ಆಯ್ಕೆ

## ಬಂಜಾರ ಸಂಸ್ಕೃತಿ, ಭಾಷಾ ಅಕಾಡೆಮಿಯ ವಾರ್ಷಿಕ ಪ್ರಶಸ್ತಿ ಪ್ರಕಟ

ಬೆಂಗಳೂರು, ಫೆ.9- ಬಂಜಾರ ಸಂಸ್ಕೃತಿ ಮತ್ತು ಭಾಷಾ ಅಕಾಡೆಮಿಯು ನೂತನವಾಗಿ 'ಶ್ರೀ ಸಂತ ಸೇವಾಲಾಲ್' ಪ್ರಶಸ್ತಿ ಸ್ಥಾಪಿಸಿದ್ದು, 2025ನೇ ಸಾಲಿನ ಪ್ರಶಸ್ತಿಗೆ ನಾಡಿನ ಹಿರಿಯ ಸಾಹಿತಿ ಹಾಗೂ ಮಾಜಿ ಸಚಿವೆ ಶ್ರೀಮತಿ ಬಿ.ಟಿ. ಲಲಿತಾನಾಯಕ್ ಭಾಜನರಾಗಿದ್ದಾರೆ. ಈ ಪ್ರಶಸ್ತಿಯು ಒಂದು ಲಕ್ಷ ನಗದು, ನೆನಪಿನ ಕಾಣಿಕೆ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ.

ಇಲ್ಲಿನ ಕನ್ನಡ ಭವದಲ್ಲಿ ನಡೆದ ಸುದ್ದಿಗೋಷ್ಠಿಯಲ್ಲಿ ಅಕಾಡೆಮಿ ಅಧ್ಯಕ್ಷ ಡಾ. ವಿ.ಆರ್. ಗೋವಿಂದಸ್ವಾಮಿ ಮಾತನಾಡಿ, ಬಂಜಾರ ಸಮುದಾಯದ ಕಲಾವಿದರು, ಸಾಹಿತಿಗಳು ಹಾಗೂ ಇತರ ಸಾಂಸ್ಕೃತಿಕ ಕ್ಷೇತ್ರದ ಸಾಧಕರಿಗೆ ಅಕಾಡೆಮಿ ವತಿಯಿಂದ ಹೊಸದಾಗಿ ಸ್ಥಾಪಿಸಿರುವ ಶ್ರೀ ಸಂತ ಸೇವಲಾಲ್ ಪ್ರಶಸ್ತಿ ಹಾಗೂ 2023-24ನೇ ಸಾಲಿನ ಗೌರವ ಪ್ರಶಸ್ತಿ ಮತ್ತು ವಾರ್ಷಿಕ ಪ್ರಶಸ್ತಿಗಳ ಪುರಸ್ಕೃತರ ಹೆಸರುಗಳನ್ನು ಪ್ರಕಟಿಸಿದರು.

ಎರಡು ವರ್ಷಗಳ (2023-24) ಗೌರವ ಪ್ರಶಸ್ತಿಗೆ ಒಟ್ಟು ಹತ್ತು





**ದಾವಣಗೆರೆಯ ರಾಘವೇಂದ್ರ ನಾಯಕ್ ಅವರಿಗೆ ಅಕಾಡೆಮಿ ಗೌರವ ಪ್ರಶಸ್ತಿ**

**ಚಿನ್ನಸಮುದ್ರದ ಸಿ.ಎಚ್. ಉಮೇಶ್ ನಾಯಕ್ ಅವರಿಗೆ ಅಕಾಡೆಮಿ ಪ್ರಶಸ್ತಿ**

ಮಂದಿ ಸಾಧಕರನ್ನು ಹಾಗೂ ವಾರ್ಷಿಕ ಪ್ರಶಸ್ತಿಗೆ ಒಟ್ಟು 20 ಮಂದಿ ಸಾಧಕರನ್ನು ಆಯ್ಕೆ ಮಾಡಲಾಗಿದೆ. ಗೌರವ ಪ್ರಶಸ್ತಿ ತಲಾ 50 ಸಾವಿರ ರೂ. ಹಾಗೂ ವಾರ್ಷಿಕ ಪ್ರಶಸ್ತಿಯು ತಲಾ 25 ಸಾವಿರ ರೂ. ನಗದು, ನೆನಪಿನ ಕಾಣಿಕೆ ಮತ್ತು ಪ್ರಶಸ್ತಿ ಪತ್ರ ಒಳಗೊಂಡಿದೆ. ಮುಂಬರುವ ಮಾರ್ಚ್‌ನಲ್ಲಿ ಪ್ರಶಸ್ತಿ ಪ್ರದಾನ ಸಮಾರಂಭ ಆಯೋಜಿಸಲಿದ್ದು, ಶೀಘ್ರವೇ ದಿನಾಂಕ ಮತ್ತು ಸ್ಥಳ ನಿಗದಿಪಡಿಸಲಾಗುವುದು ಎಂದು ತಿಳಿಸಿದರು.

**ಗೌರವ ಪ್ರಶಸ್ತಿ ಪುರುಸ್ಕೃತರು :** 2024ನೇ ಸಾಲಿಗೆ ಚಿತ್ರದುರ್ಗ ಜಿಲ್ಲೆಯ ಪುಟ್ಟಿಬಾಯಿ ಲಕ್ಶ್ಮಣ ನಾಯಕ್ (ಜಾನಪದ) ಮತ್ತು ದಾವಣಗೆರೆಯ ರಾಘವೇಂದ್ರ ನಾಯಕ್ (ಭಾಷಾ ಜಾಗೃತಿ)

**ವಾರ್ಷಿಕ ಪ್ರಶಸ್ತಿ ಪುರುಸ್ಕೃತರು** : 2023ನೇ ಸಾಲಿಗೆ ಚಿತ್ರದುರ್ಗದ ವೆಂಕಟೇಶ್ ನಾಯ್ಕ (ನಗಾರಿ ಕಲಾವಿದ) ದಾವಣಗೆರೆಯ ಎಲ್. ಕುಬೇರನಾಯಕ್ (ಗಾಯಕ) 2024ನೇ ಸಾಲಿಗೆ ಚಿತ್ರದುರ್ಗದ ಎಸ್. ಮೀರಾನಾಯ್ಕ್ (ಗಾಯನ), ದಾವಣಗೆರೆ ತಾಲ್ಲೂಕಿನ ಚಿನ್ನಸಮುದ್ರದ ಸಿ.ಎಚ್. ಉಮೇಶ್ ನಾಯಕ್ (ಗಾಯಕ).

# ಮಕ್ಕಳು ಪಠ್ಯೇತರ ಚಟುವಟಿಕೆಗೂ ಪ್ರಾಮುಖ್ಯತೆ ನೀಡಲಿ

ದಾವಣಗೆರೆ, ಫೆ.10- ವಿದ್ಯಾರ್ಥಿಗಳಿಗೆ ಪಠ್ಯದ ಜತೆಗೆ ಕಲೆ, ಸಾಹಿತ್ಯ, ಸಂಸ್ಕೃತಿ ಸೇರಿದಂತೆ ಪಠ್ಯೇತರ ಚಟುವಟಿಕೆಗಳಿಗೂ ಹೆಚ್ಚಿನ ಪ್ರಾಮುಖ್ಯತೆ ನೀಡಬೇಕೆಂದು ಲತಿಕ್ ದಿನೇಶ್ ಶೆಟ್ಟಿ ತಿಳಿಸಿದರು.

ಖುಷಿ ಎಜುಕೇಶನ್ ಟ್ರಸ್ಟ್ ವತಿಯಿಂದ ನಗರದ ಕುವೆಂಪು ಕನ್ನಡ ಭವನದಲ್ಲಿ ನಿನ್ನೆ ಸಂಜೆ ಆಯೋಜಿಸಿದ್ದ 'ಪರ್ವ ಜಾನಪದ ಲೋಕ' ಹಾಗೂ ಶಾಲೆಯ 10ನೇ ವರ್ಷದ ವಾರ್ಷಿಕೋತ್ಸವದಲ್ಲಿ ಅವರು ಮಾತನಾಡಿದರು.

ವಿದ್ಯಾರ್ಥಿಗಳು ಸ್ವದೇಶಿ ಕಲೆಗಳು ಹಾಗೂ ಸಂಸ್ಕೃತಿಯನ್ನು ಬಾಲ್ಯದಿಂದಲೇ ಮೈಗೂಡಿಸಿಕೊಂಡು ಬೆಳೆಯಬೇಕು. ಹಾಗೆಯೇ ಸದ್ಗುಣಗಳನ್ನು ಕಲಿತು ದೇಶಕ್ಕೆ ಉತ್ತಮ ಪ್ರಜೆಯಾಗಬೇಕು ಎಂದು ಮಕ್ಕಳಿಗೆ ಕಿವಿ ಮಾತು ಹೇಳಿದರು.

ಭಾರತೀಯ ರೆಡ್ ಕ್ರಾಸ್ ಸಂಸ್ಥೆಯ ಮಾಜಿ ಖಜಾಂಚಿ ಅನಿಲ್ ಬಾರೆಂಗಳ್ ಮಾತನಾಡಿ, ವಿದ್ಯಾಭ್ಯಾಸದ ಜತೆಗೆ ಕ್ರೀಡಾ ಕ್ಷೇತ್ರದಲ್ಲೂ ಆಸಕ್ತಿ ತೋರಬೇಕು. ಈ ನಿಟ್ಟಿನಲ್ಲಿ ಪಾಲಕರು ಮಕ್ಕಳ ಆಸಕ್ತಿಗೆ ಹೆಚ್ಚಿನ ಪ್ರೋತ್ಸಾಹ ನೀಡಬೇಕು ಎಂದು ಸಲಹೆ ನೀಡಿದರು. ಶಿಕ್ಷಣ ಸಂಸ್ಥೆ ಹುಟ್ಟು ಹಾಕುವುದು ಸುಲಭ ಕೆಲಸವಾದರೂ ಗುಣಮಟ್ಟದ ಶಿಕ್ಷಣ ನೀಡುವ ಶಾಲೆ ನಡೆಸಿಕೊಂಡು




**ಲತಿಕಾ ದಿನೇಶ್ ಶೆಟ್ಟಿ ಕರೆ**

ಹೋಗುವುದು ಕಷ್ಟದ ಕೆಲಸವಾಗಿದೆ ಎಂದು ತಿಳಿಸಿದರು.

ಟ್ರಸ್ಟಿನ ಅಧ್ಯಕ್ಷರಾದ ಆರ್.ಆರ್. ಜ್ಯೋತಿ, ಖಜಾಂಚಿ ವಿಕ್ರಂ ವಿ. ಜೋಶಿ, ಕಾರ್ಯದರ್ಶಿ ಕಿಶನ್ ಪಟೇಲ್, ನಿರ್ದೇಶಕ ನಿಖಿಲಾ ಧೀರಜ್, ಸಂತೋಷ್, ಮುಖ್ಯ ಶಿಕ್ಷಕಿ ಹೆಚ್.ಪಿ. ಲಕ್ಷ್ಮಿ ಹಾಗೂ ಶಾಲಾ ಸಿಬ್ಬಂದಿ ಇದ್ದರು.

# ಇಚ್ಛಾಮರಣಕ್ಕೆ ಸರ್ಕಾರದ ಒಪ್ಪಿಗೆ : ಹೋರಾಟಕ್ಕೆ ದೊರೆತ ಪ್ರತಿಫಲ

ದಾವಣಗೆರೆ, ಫೆ.10- ಕರಳು ಕ್ಯಾನ್ಸರ್‌ನಿಂದ ಬಳಲುತ್ತಿದ್ದ ನಾನು ದಯಾಮರಣಕ್ಕೆ ಹೋರಾಟ ನಡೆಸುತ್ತಿದ್ದು, ಕಳೆದ 24 ವರ್ಷಗಳ ನಂತರ ಇಚ್ಛಾ ಮರಣಕ್ಕೆ ಸರ್ಕಾರ ಒಪ್ಪಿಗೆ ನೀಡಿರುವುದು ಹರ್ಷವನ್ನುಂಟು ಮಾಡಿದೆ ಎಂದು ನಿವೃತ್ತ ಶಿಕ್ಷಕರೂ ಆದ ದಯಾಮರಣ ಹೋರಾಟಗಾರ್ತಿ ಶ್ರೀಮತಿ ಹೆಚ್.ಬಿ. ಕರಿಬಸಮ್ಮ ತಿಳಿಸಿದರು.

ಸೋಮವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಗುಣಪಡಿಸಲಾಗದ ಕಾಯಿಲೆಗಳಿಂದ ಬಳಲುತ್ತಿರುವ ರೋಗಿಗಳು ಘನತೆಯಿಂದ ಮರಣ ಹೊಂದುವ ಹಕ್ಕು ಕರ್ನಾಟಕದಲ್ಲಿ ಜಾರಿಗೆ ಬಂದಿರುವುದು ನಿರಂತರವಾಗಿ ನಡೆಸಿದ ಹೋರಾಟದ ಫಲ ಎಂದು ಹೇಳಿದರು.

ಬದುಕಿನಲ್ಲಿ ಹಲವು ಬಾರಿ ಸಾವಿನ ಮನೆಯ ಬಾಗಿಲು ಬಡಿದಿದ್ದೇನೆ. ಕಾಯಿಲೆಯಿಂದ ನರಳಿ ಸಂಕಟ ಅನುಭವಿಸಿದ್ದೇನೆ. ಆತ್ಮಹತ್ಯೆ ಮಾಡಿಕೊಳ್ಳಲು ಮನಸ್ಸು ಒಪ್ಪಲಿಲ್ಲ. ಮರಣವೂ ಘನತೆಯಿಂದ ಇರಬೇಕು ಎಂಬುದು ನನ್ನ ಬಲವಾದ ನಂಬಿಕೆ. ವಿಶ್ವದ ಹಲವು ದೇಶಗಳಲ್ಲಿರುವ ಈ ಅವಕಾಶ ಭಾರತದಲ್ಲಿ ಏಕಿಲ್ಲ ? ಎಂಬ ಪ್ರಶ್ನೆ ಕಾಡಿತ್ತು ಎಂದು ಹೇಳಿದರು.

ನ್ಯಾಯಾಲಯದ ಮೆಟ್ಟಿಲು ಏರಿ ಕಾನೂನಾತ್ಮಕ ಹಕ್ಕು ಪಡೆಯಲು ಪ್ರಯತ್ನಿಸಿದ್ದೇನೆ. ಕಾನೂನಾತ್ಮಕವಾಗಿ ಇಚ್ಛಾಮರಣ ಪಡೆದ ಮೊದಲ ವ್ಯಕ್ತಿ ನಾನಾಗಬೇಕು ಎಂಬ ಬಯಕೆ ಇದೆ. ಈ ಅವಕಾಶಕ್ಕೆ ಕಾಯುತ್ತಿದ್ದೇನೆ ಎಂದು ಅವರು ತಿಳಿಸಿದರು.

ಮಾರಣಾಂತಿಕ ಕಾಯಿಲೆಗಳಿಂದ ಬಳಲುವ ವೃದ್ಧರ ಸಂಖ್ಯೆ



**ದಯಾಮರಣ ಹೋರಾಟಗಾರ್ತಿ ಹೆಚ್.ಬಿ. ಕರಿಬಸಮ್ಮ ಸಂತಸ**

ದೇಶದಲ್ಲಿ ದೊಡ್ಡದಾಗಿದೆ. ಘನತೆಯಿಂದ ಸಾಯುವ ಅವಕಾಶ ಸಿಗದೇ ನನ್ನಂತೆ ನರಳುತ್ತಿದ್ದಾರೆ. ಇಚ್ಛಾ ಮರಣ ಕಾನೂನು ಜಾರಿಗೆ ಒತ್ತಾಯಿಸಿ ಹೋರಾಟ ಆರಂಭಿಸಿದಾಗ ಎಲ್ಲರೂ ಗೇಲಿ ಮಾಡುತ್ತಿದ್ದರು. ಕುಟುಂಬದ ಸದಸ್ಯರು, ಸಂಬಂಧಿಕರು ದೂರವಾದರು. 16 ವರ್ಷಗಳಿಂದ ವೃದ್ಧಾಶ್ರಮದಲ್ಲಿ ನೆಲೆಸಿ, ಹೋರಾಟ ಮುಂದುವರಿಸಿದೆ ಎಂದು ನೆನಪಿಸಿಕೊಂಡರು.

ಈ ವೇಳೆ ವಿಜಯಕುಮಾರಿ, ಹೆಚ್.ವಿ. ವೆಂಕಟೇಶ್, ಶಾಂತಮ್ಮ, ಟಿ.ಎನ್. ಚಿಕ್ಕಿಸ್ ಸುದ್ದಿಗೋಷ್ಠಿಯಲ್ಲಿದ್ದರು.



## ಕೊಟ್ಟೂರೇಶ್ವರ ಸ್ವಾಮಿ ಪುರಾಣ ಪ್ರವಚನದಲ್ಲಿ ತೊಟ್ಟಿಲು ಪೂಜೆ

ದಾವಣಗೆರೆ, ಫೆ. 10 - ನಗರದ ವಿರಕ್ತಮಠದ ಆವರಣದಲ್ಲಿ ಶ್ರೀ ಕೊಟ್ಟೂರು ಗುರುಬಸವೇಶ್ವರರ ಪುರಾಣ ಪ್ರವಚನ ನಡೆಯುತ್ತಿದ್ದು, ಇಂದಿನ ಪ್ರವಚನದಲ್ಲಿ ಬಾಲಕ ಶ್ರೀ ಗುರು ಕೊಟ್ಟೂರೇಶ್ವರ ಸ್ವಾಮಿಗೆ ತೊಟ್ಟಿಲು ಪೂಜೆ ನಡೆಯಿತು. ಈ ಸಂದರ್ಭದಲ್ಲಿ ಮಹಿಳೆಯರು, ಗಣ್ಯರು ಪೂಜೆ ಸಲ್ಲಿಸಿದರು.

# 22 ಕೆರೆ ತುಂಬಿಸುವ ಯೋಜನೆಗೆ ತರಳಬಾಳು ಜಗದ್ಗುರುಗಳಿಂದಲೇ ಮರು ಚಾಲನೆ ಆಗಲಿದೆ

ಭರಮಸಾಗರ, ಫೆ.10- ತರಳಬಾಳು ಜಗದ್ಗುರುಗಳ ಕನಸಿನ ಕೂಸಾದ 22 ಕೆರೆ ತುಂಬಿಸುವ ಯೋಜನೆಯ ಲೋಪ ಸರಿಪಡಿಸಿ, ಶ್ರೀಗಳಿಂದಲೇ ಕೆರೆ ತುಂಬಿಸುವ ಯೋಜನೆಗೆ ಮರು ಚಾಲನೆ ಆಗುತ್ತಿದೆ ಎಂದು ಮಾಯಕೊಂಡ ಶಾಸಕ ಕೆ.ಎಸ್. ಬಸವಂತಪ್ಪ ತಿಳಿಸಿದರು.



ಇಲ್ಲಿ ನಡೆಯುತ್ತಿರುವ ತರಳಬಾಳು ಮಹೋತ್ಸವದ ಮೂರನೇ ದಿನದ ಕಾರ್ಯಕ್ರಮದಲ್ಲಿ ಭಾಗವಹಿಸಿ ಅವರು ಮಾತನಾಡಿದರು.

ಕೆರೆ ತುಂಬಿಸುವ ಯೋಜನೆಯ ಲೋಪ ಸರಿಪಡಿಸುವ ನಿಟ್ಟಿನಲ್ಲಿ ಹೊಸದಾಗಿ ಪೈಪುಗಳನ್ನು ಅಳವಡಿಸಬೇಕು. ಈಗಾಗಲೇ 20 ಕೋಟಿ ರೂ. ಟೆಂಡರ್ ಕರೆದಿದ್ದಾರೆ. ಇನ್ನೂ 70 ಕೋಟಿ ರೂ. ಬಂದರೆ ಮೇನ್ ಪೈಪುಗಳನ್ನು ಸರಿಪಡಿಸಬಹುದು ಎಂದು ಅಧಿಕಾರಿಗಳು ಹೇಳುತ್ತಿದ್ದಾರೆ ಎಂದು ಶ್ರೀಗಳಿಗೆ ಹೇಳಿದರು.

ಜಗದ್ಗುರುಗಳು ಎಲ್ಲೇ ಕಾಲಿಟ್ಟರು ನೀರು ಬರುತ್ತಿದೆ. ಮಾಯಕೊಂಡ, ಅರಸೀಕೆರೆ, ಚನ್ನಗಿರಿ ಮತ್ತು ಜಗಳೂರಿಗೂ ಶ್ರೀಗಳ ಕೃಪೆಯಿಂದ ನೀರು ತಲುಪುತ್ತಿದೆ ಎಂದು ಹೇಳಿದರು.

# ನಗರದ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಳೆ ಭರತ ಹುಣ್ಣಿಮೆ



ದಾವಣಗೆರೆ, ಫೆ. 10- ನಗರದ ದೇವರಾಜ ಅರಸು ಬಡಾವಣೆ 'ಎ' ಬ್ಲಾಕ್‌ನಲ್ಲಿರುವ ಶ್ರೀ ಮಾತಾ ಅನ್ನಪೂರ್ಣೇಶ್ವರಿ ದೇವಸ್ಥಾನದಲ್ಲಿ ನಾಡಿದ್ದು ದಿನಾಂಕ 12ರ ಬುಧವಾರ ಭರತ ಹುಣ್ಣಿಮೆ ಪ್ರಯುಕ್ತ ಶ್ರೀ ಸತ್ಯ ನಾರಾಯಣ ಸ್ವಾಮಿ ಪೂಜಾ ಕಥಾ, ಪ್ರಧಾನ ದೇವತೆ ಶ್ರೀ ಮಾತಾ ಅನ್ನಪೂರ್ಣೇಶ್ವರಿಗೆ ಮಂಗಳಾರತಿ ಮತ್ತು ತೀರ್ಥ ಪ್ರಸಾದ ವಿನಿಯೋಗ ನಡೆಯಲಿದೆ ಎಂದು ದೇವಸ್ಥಾನ ಸಮಿತಿ ಗೌರವ ಅಧ್ಯಕ್ಷ ಆರ್.ಜಿ. ನಾಗೇಂದ್ರ ಪ್ರಕಾಶ್ ತಿಳಿಸಿದ್ದಾರೆ. ಶ್ರೀಮತಿ ನಾಗರತ್ನಮ್ಮ ಮತ್ತು ಶಶಿಧರ್ ಮತ್ತು ಕುಟುಂಬದವರು ಸೇವಾಕರ್ತರಾಗಿದ್ದಾರೆ ಎಂದು ದೇವಸ್ಥಾನ ಸಮಿತಿ ಅಧ್ಯಕ್ಷ ಪ್ರಕಾಶ್ ಪಾಟೀಲ್ ವಿವರಿಸಿದ್ದಾರೆ.

# ಹರಿಹರ : ಉಚಿತ ಇ-ಕೆವೈಸಿ ನೋಂದಣಿಗೆ ಅವಕಾಶ

ಹರಿಹರ, ಫೆ. 10 - ಹರಿಹರ ತಾಲ್ಲೂಕಿನ ನಗರ ಮತ್ತು ಗ್ರಾಮಾಂತರ ಪ್ರದೇಶದ 124 ನ್ಯಾಯಬೆಲೆ ಅಂಗಡಿಯಲ್ಲಿ ಚಾಲ್ತಿಯಲ್ಲಿರುವ 58,335 ಅಂತ್ಯೋದಯ ಅನ್ನ ಯೋಜನೆ ಮತ್ತು ಅದ್ಯತಾ ಬಿ.ಪಿ.ಎಲ್ ಪಡಿತರ ಚೀಟಿಗಳಲ್ಲಿನ ಒಟ್ಟು ಸದಸ್ಯರ ಪೈಕಿ 7567 ಅಂತ್ಯೋದಯ ಅನ್ನ ಯೋಜನೆ ಮತ್ತು ಆದ್ಯತಾ ಬಿ.ಪಿ.ಎಲ್ ಪಡಿತರ ಚೀಟಿಗಳಲ್ಲಿನ ಸದಸ್ಯರ ಇ-ಕೆವೈಸಿ ಮಾಡಲು ಬಾಕಿ ಇರುತ್ತದೆ. ಬಾಕಿ ಇರುವ 7567 ಸದಸ್ಯರುಗಳು ಕೂಡಲೇ ಇ-ಕೆವೈಸಿಯನ್ನು ಪ್ರತಿ ದಿನ ಬೆಳಗ್ಗೆ 7 ರಿಂದ ಸಂಜೆ 8 ಗಂಟೆಯವರೆಗೆ ಸಂಬಂಧಪಟ್ಟ ನ್ಯಾಯಬೆಲೆ ಅಂಗಡಿ ಅಥವಾ ರಾಜ್ಯದ ಯಾವುದೇ ನ್ಯಾಯಬೆಲೆ ಅಂಗಡಿಗೆ ಭೇಟಿ ನೀಡಿ ಪೋರ್ಟಬಿಲಿಟಿ ಮೂಲಕ ಇ-ಕೆವೈಸಿಯನ್ನು ಉಚಿತವಾಗಿ ಮಾಡಿಕೊಳ್ಳಬಹುದೆಂದು ಹರಿಹರ ತಹಶೀಲ್ದಾರ್ ಗುರುಬಸವರಾಜ್ ತಿಳಿಸಿದ್ದಾರೆ.

# ಮೈಲಾರ ಜಾತ್ರೆ : ವಿಶೇಷ ಬಸ್ ಸೌಲಭ್ಯ

ದಾವಣಗೆರೆ, ಫೆ. 10 - ಇದೇ ದಿನಾಂಕ 14 ರಂದು ನಡೆಯುವ ಮೈಲಾರ ಕಾರಣಿಕೋತ್ಸವ ಪ್ರಯುಕ್ತ ನಾಡಿದ್ದು ದಿನಾಂಕ 13 ರಿಂದ 15 ರವರೆಗೆ ಕೆಎಸ್ಸಾರ್ಟಿಸಿ ದಾವಣಗೆರೆ ವಿಭಾಗದಿಂದ 75 ಹೆಚ್ಚುವರಿ ವಿಶೇಷ ಬಸ್‌ಗಳ ವ್ಯವಸ್ಥೆ ಕಲ್ಪಿಸಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.

**ಬೇಕಾಗಿದ್ದಾರೆ**
ಆಫೀಸಿನಲ್ಲಿ ಕೆಲಸಕ್ಕೆ ಅಟೆಂಡರ್ಸ್ (ಹುಡುಗರು) ಬೇಕಾಗಿದ್ದಾರೆ.
ಊಟ, ವಸತಿ, ಸಂಬಳ ಕೊಡುತ್ತೇವೆ.
ಸ್ಥಳ : ಮೈಸೂರು (ವಿದ್ಯಾಸಂಸ್ಥೆಗೆ)
ವಯಸ್ಸು : 35 ವರ್ಷದ ಒಳಗಿನವರು ಮಾತ್ರ
ಕರೆ ಮಾಡಿ :
9964801496

# ಲಾವಣ್ಯ ಶ್ರೀಧರ್‌ಗೆ ರಾಷ್ಟ್ರ ಮಟ್ಟದ ಕಾಯಕ ರತ್ನ ಪ್ರಶಸ್ತಿ



ದಾವಣಗೆರೆ, ಫೆ. 10-ರಾಷ್ಟ್ರ ಹಾಗೂ ಅಂತರರಾಷ್ಟ್ರೀಯ ಯೋಗಾಸನ ಸ್ಪರ್ಧೆಯಲ್ಲಿ ಅತ್ಯುತ್ತಮ ಸಾಧನೆ ಮಾಡಿದ ನಗರದ ಎಸ್. ಎ. ಎಸ್. ಎಸ್. ಯೋಗ ಕೇಂದ್ರದ ಶ್ರೀಮತಿ ಎಸ್.ಪಿ. ಲಾವಣ್ಯ ಶ್ರೀಧರ್ ಅವರಿಗೆ ರಾಷ್ಟ್ರಮಟ್ಟದ ಕಾಯಕ ರತ್ನ ಪ್ರಶಸ್ತಿ ಲಭಿಸಿದೆ. ಬೆಳಕು ಸಾಹಿತ್ಯ, ಶೈಕ್ಷಣಿಕ, ಸಾಂಸ್ಕೃತಿಕ, ವತಿಯಿಂದ ರಾಯಚೂರಿನಲ್ಲಿ ಕಳೆದ ವಾರ ನಡೆದ ರಾಷ್ಟ್ರಮಟ್ಟದ ಕನ್ನಡ ಕಲರವ ಸಮ್ಮೇಳನದಲ್ಲಿ ಬೆಳಕು ಟ್ರಸ್ಟ್ ಅಧ್ಯಕ್ಷ ಅಣ್ಣಪ್ಪ ಮೇಟಿ ಗೌಡ್ರು ಇವರ ಅಧ್ಯಕ್ಷತೆಯಲ್ಲಿ ಯೋಗ ಕ್ಷೇತ್ರದಲ್ಲಿನ ಸಾಧನೆ ಗುರುತಿಸಿ ಲಾವಣ್ಯ ಶ್ರೀಧರ್ ಅವರಿಗೆ ಈ ಪ್ರಶಸ್ತಿ ನೀಡಿ ಗೌರವಿಸಲಾಯಿತು.

# ನೃತ್ಯ ಸ್ಪರ್ಧೆ : ಕೆ. ಶಾನ್ವಿಕಾ ಪ್ರಥಮ



ದಾವಣಗೆರೆ, ಫೆ.10- ಡಿಲೈಟ್ ಡ್ಯಾನ್ಸ್ ಅಂಡ್ ಇವೆಂಟ್ಸ್ ವತಿಯಿಂದ ಹಿರೇಕೆರೂರಿನಲ್ಲಿ ಕಳೆದ ವಾರ ನಡೆದ ರಾಜ್ಯ ಮಟ್ಟದ ನೃತ್ಯ ಸ್ಪರ್ಧೆಯಲ್ಲಿ ಕೆ. ಶಾನ್ವಿಕಾ ನಾಯ್ಕ್ ಪ್ರಥಮ ಸ್ಥಾನ ಗಳಿಸಿದ್ದಾರೆ.

ಶಾನ್ವಿಕಾ ನಾಯ್ಕ್, ತೋಳಹುಣಸೆ ಗ್ರಾಮದ ಕುಮಾರ್ ನಾಯ್ಕ್ ಹಾಗೂ ತ್ರಿವೇಣಿ ದಂಪತಿಯ ಪುತ್ರಿ. ಕೆಡಿ ಡ್ಯಾನ್ಸ್ ಕಂಪನಿಯ ಕರ್ಣ ಮಾಸ್ಟರ್ ಬಳಿ ತರಬೇತಿ ಪಡೆಯುತ್ತಿದ್ದಾರೆ.

# ಮಾಯಕೊಂಡ ಬ್ಲಾಕ್ ಯುವ ಕಾಂಗ್ರೆಸ್ ಅಧ್ಯಕ್ಷರಾಗಿ ಲೋಕೇಶ್ ನಾಯ್ಕ್ ಆಯ್ಕೆ



ದಾವಣಗೆರೆ, ಫೆ. 10 - ಮಾಯಕೊಂಡ ವಿಧಾನಸಭಾ ಕ್ಷೇತ್ರದ ಯುವ ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ನಡೆದ ಚುನಾವಣೆಯಲ್ಲಿ ಅಧ್ಯಕ್ಷರಾಗಿ ಲೋಕೇಶ್ ನಾಯ್ಕ್ ಬಿ. ಆಯ್ಕೆಯಾಗಿದ್ದಾರೆ.

ಲೋಕೇಶ್, ದಾವಣಗೆರೆ ತಾಲ್ಲೂಕು ಹೆಚ್. ಕಲಪನಹಳ್ಳಿ ನಿವಾಸಿ. ಸ್ಪರ್ಧಿಸಿದ್ದ ಇತರೆ ಅಭ್ಯರ್ಥಿಗಳಿಗಿಂತ ಲೋಕೇಶ್ ನಾಯ್ಕ್ ಹೆಚ್ಚಿನ ಮತಗಳನ್ನು ಪಡೆದು ಅಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ.


# ಸಯೀದಾ ಸಾನಿಯಾಗೆ 3ನೇ ರ್‍ಯಾಂಕ್




ಚಿತ್ರದುರ್ಗ, ಫೆ.10- ನಗರದ ಶ್ರೀ ವೆಂಕಟೇಶ್ವರ ಶಿಕ್ಷಣ ಮಹಾವಿದ್ಯಾಲಯದ ವಿದ್ಯಾರ್ಥಿನಿ ಸಯೀದಾ ಸಾನಿಯಾ ಮೆಹಕ್ ಅವರು ಬಿ.ಇಡಿ., ಪದವಿ ಅಂತಿಮ ಪರೀಕ್ಷೆಯಲ್ಲಿ 3ನೇ ರ್‍ಯಾಂಕ್ ಗಳಿಸಿದ್ದಾರೆ.

# ಭರತ ಹುಣ್ಣಿಮೆ : ಉಚ್ಚಂಗಿದುರ್ಗಕ್ಕೆ ವಿಶೇಷ ಕೆಎಸ್ಸಾರ್ಟಿಸಿ ಬಸ್ ಸೌಲಭ್ಯ

ದಾವಣಗೆರೆ, ಫೆ. 10 - ಶ್ರೀಕ್ಷೇತ್ರ ಉಚ್ಚಂಗಿದುರ್ಗದ ಭರತ ಹುಣ್ಣಿಮೆ ನಾಳೆ ದಿನಾಂಕ 11 ರಿಂದ 13 ರವರೆಗೆ ಜರುಗಲಿದೆ. ಭಕ್ತಾದಿಗಳ ಅನುಕೂಲಕ್ಕಾಗಿ ರಾಜ್ಯ ರಸ್ತೆ ಸಾರಿಗೆ ದಾವಣಗೆರೆ ವಿಭಾಗದ ಘಟಕಗಳಿಂದ 45 ಹೆಚ್ಚುವರಿ ವಿಶೇಷ ಬಸ್‌ಗಳ ಸಂಚಾರ ಕಲ್ಪಿಸಲಾಗಿದೆ ಎಂದು ವಿಭಾಗೀಯ ನಿಯಂತ್ರಣಾಧಿಕಾರಿ ತಿಳಿಸಿದ್ದಾರೆ.




KA/SK/DVG-028/2024-2026. O/P @ B.V. Nagar P.O. **JANATHAVANI** - Published, Owned and Printed by M.S. Vikas, at Jayadhara Offset Printers, # 605, Hadadi Road, Davangere - 5, Published from # 605, Hadadi Road, Davangere - 5. Editor: M.S. Vikas